ಕನಕದಾಸ
ರಾಮಧಾನ್ಯ ಪ್ರಸಂಗ ಓದು



ಸಿ.ಪಿ. ನಾಗರಾಜ

ಕನಕದಾಸರ
ರಾಮಧಾನ್ಯ ಪ್ರಸಂಗ ಓದು

ಸಿ.ಪಿ. ನಾಗರಾಜ

ನಾಗು ಸ್ಮಾರಕ ಪ್ರಕಾಶನ
೭೫, 'ಎ' ಬ್ಲಾಕ್, ೫ ನೆಯ ಕ್ರಾಸ್, ಕೃಷ್ಣ ಗಾರ್ಡನ್
ಆರ್.ವಿ. ಕಾಲೇಜು ಪೋಸ್ಟ್, ಬೆಂಗಳೂರು-೫೬೦೦೫೯

RAMADHANYA PRASANGA ODU

by C.P. Nagaraja, Published by Nagu Smaraka Prakashana, 75, `A' Block, 5th Cross, Krishna Garden, R.V. College Post, Bengaluru-560059, Mobile: 9986347521.

First Edition : 2022

Pages : 72

Price : Rs. 100/-

Paper : 80gsm NS Maplitho

Size : Demy 1/8

Copies : 500

ಪುಟಗಳು : 72

ಪ್ರತಿಗಳು : 500

ಬೆಲೆ : ರೂ. 100/-

ಮುಖಪುಟ ವಿನ್ಯಾಸ : ಎಂ.ಎಲ್.ಸೋಮವರದ, ಮಂಡ್ಯ
ಮೊ.9743512174, 8618580924

ಪ್ರತಿಗಳು ದೊರೆಯುತ್ತವೆ:

ಹರಿವು ಬುಕ್ಸ್
ಬೆಂಗಳೂರು
ದೂರವಾಣಿ: 080-2660 3000

ಆರ್. ಸುಧೀಂದ್ರ ಕುಮಾರ್
ಮೈಸೂರು
ಮೊಬೈಲ್: 8892626269

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ನನ್ನ ನುಡಿ

ಕನಕದಾಸರು ಭಾಮಿನಿ ಷಟ್ಪದಿಯಲ್ಲಿ ರಚಿಸಿರುವ ೧೫೮ ಪದ್ಯಗಳಿಂದ ಕೂಡಿದ 'ರಾಮಧಾನ್ಯ ಚರಿತ್ರೆ'ಯಲ್ಲಿ ಪ್ರಮುಖ ಪಾತ್ರಗಳಾದ 'ರಾಗಿ' ಮತ್ತು 'ಬತ್ತ' ಧಾನ್ಯಗಳ ನಡುವೆ ನಡೆದ ಮಾತುಗಳನ್ನು ನಾಟಕ ರೂಪಕ್ಕೆ ಜೋಡಿಸಿ, ಪದ ವಿಂಗಡಣೆ ಮತ್ತು ಪದಗಳಿಗೆ ತಿರುಳನ್ನು ಬರೆದು ಗುರುಗಳಾದ ಕೆ.ವಿ.ನಾರಾಯಣ ಅವರಿಗೆ ತೋರಿಸಿದೆನು. ನನ್ನ ಓದು ಬರಹಕ್ಕೆ ಸದಾಕಾಲ ಮಾರ್ಗದರ್ಶಕರಾಗಿರುವ ಗುರುಗಳು 'ರಾಮಧಾನ್ಯ ಪ್ರಸಂಗ ಓದು' ಹೊತ್ತಿಗೆಯ ರಚನೆಗೆ ಉಪಯುಕ್ತವಾದ ಸಲಹೆ ಮತ್ತು ಸೂಚನೆಗಳನ್ನು ನೀಡಿದರು.

ಗುರು ಸಮಾನರಾದ ದೇ. ಜವರೇಗೌಡರು ಸಂಪಾದಿಸಿರುವ 'ರಾಮಧಾನ್ಯ ಚರಿತ್ರೆ'ಯಿಂದ ನಾಟಕ ರೂಪಕ್ಕೆ ಅಗತ್ಯವಾಗಿದ್ದ ೬೦ ಪದ್ಯಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಈ ಹೊತ್ತಿಗೆಯು ಮೂರು ಭಾಗಗಳಲ್ಲಿ ರಚನೆಗೊಂಡಿದೆ.

೧. ನಾಟಕ ರೂಪ

೨. ಪದ ವಿಂಗಡಣೆ ಮತ್ತು ತಿರುಳು

೩. ಕನಕದಾಸರ 'ರಾಮಧಾನ್ಯ ಚರಿತ್ರೆ' ಕಾವ್ಯದಿಂದ ಆಯ್ಕೆ ಮಾಡಿಕೊಂಡಿರುವ ಪದ್ಯಗಳು.

ಈ ರೀತಿ ಸಿದ್ಧಪಡಿಸಿದ ಬರಹವನ್ನು ಹೊನಲು ಮಿಂದಾಣಕ್ಕೆ(honalu.net) ಕಳುಹಿಸಿದೆನು. ಹೊನಲು ಮಿಂದಾಣದ ಸಂಪಾದಕ ವರ್ಗದವರು ನಾಲ್ಕು ಕಂತುಗಳಲ್ಲಿ ಪ್ರಕಟಿಸಿದರು. ಮೂಡಿ ಬಂದ ಬರಹಕ್ಕೆ ಹೊನಲು ಮಿಂದಾಣದ ಓದುಗ ಬಳಗದವರು ಮೆಚ್ಚುಗೆಯನ್ನು ಸೂಚಿಸಿದರು. ಇದರ ಕರಡು ಪ್ರತಿಯನು

ಓದಿ ನೋಡಿದ ಗುರುಗಳಾದ ಕೆ.ಮರುಳಸಿದ್ದಪ್ಪನವರು ಮತ್ತು ನನ್ನ ಗೆಳೆಯರು ಉತ್ತೇಜನದ ನುಡಿಗಳನ್ನಾಡಿದ್ದಾರೆ.

ಪದಗಳಿಗೆ ತಿರುಳು ಮತ್ತು ಟಿಪ್ಪಣಿಯನ್ನು ಬರೆಯುವಾಗ ಗುರು ಸಮಾನರಾದ ಡಿ.ಎನ್.ಶಂಕರ ಬಟ್ ಅವರು ಕನ್ನಡ ಬರಹದಲ್ಲಿ ಬಳಸಬೇಕಾದ ಲಿಪಿಗಳ ಬಗ್ಗೆ ಹೇಳಿರುವ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ನನ್ನ ಬರಹಗಳ ಮೊದಲ ಓದುಗಳಾದ ನನ್ನ ಹೆಂಡತಿ ಗಾಯತ್ರಿ ತನ್ನ ಅನಿಸಿಕೆಯನ್ನು ತಿಳಿಸಿದ್ದಾಳೆ.

ಈ ಹೊತ್ತಿಗೆಯ ರಚನೆಗೆ ನೆರವಾದ ಮೇಲ್ಕಂಡ ಗುರುಹಿರಿಯರಿಗೆ, ಸಂಪಾದಕರಿಗೆ ಮತ್ತು ಗೆಳೆಯರೆಲ್ಲರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

– ಸಿ.ಪಿ.ನಾಗರಾಜ

ರಾಮಧಾನ್ಯ ಪ್ರಸಂಗ ಓದು

ಪರಿವಿಡಿ

ಕನಕದಾಸ

ಕವಿಗಳು–ಹರಿದಾಸರು–ಕೀರ್ತನಕಾರರು

ಹೆಸರು	:	೧. ತಂದೆತಾಯಿಗಳು ಇಟ್ಟಿದ್ದ ಹೆಸರು: ತಿಮ್ಮಪ್ಪ ನಾಯಕ. ೨. ಬಾಡ ಗ್ರಾಮದ ಸುತ್ತಮುತ್ತಣ ಪ್ರಾಂತ್ಯದ ಒಡೆಯನಾಗಿ ಆಳುತ್ತಿದ್ದಾಗ ಪಡೆದ ಹೆಸರು: ಕನಕ ನಾಯಕ. ೩. ಹರಿದಾಸರಾಗಿ ಬಾಳಲು ತೊಡಗಿದಾಗ ಬಂದ ಹೆಸರು: ಕನಕದಾಸ.
ಕಾಲ	:	ಕ್ರಿ.ಶ.೧೫೦೮–೧೬೦೬
ಹುಟ್ಟಿದ ಊರು	:	ಬಾಡ, ಶಿಗ್ಗಾವಿ ತಾಲ್ಲೂಕು ಹಾವೇರಿ ಜಿಲ್ಲೆ, ಕರ್ನಾಟಕ ರಾಜ್ಯ
ತಾಯಿ	:	ಬಚ್ಚಮ್ಮ
ತಂದೆ	:	ಬೀರಪ್ಪ ನಾಯಕ
ಕೃತಿಗಳು	:	ಕೀರ್ತನೆಗಳು–೪೦೦
ಕಾವ್ಯಗಳು	:	೧. ಮೋಹನ ತರಂಗಿಣಿ ೨. ನಳ ಚರಿತ್ರೆ ೩. ಹರಿಭಕ್ತಿ ಸಾರ ೪. ರಾಮಧಾನ್ಯ ಚರಿತ್ರೆ

ಪಾತ್ರಗಳು

ರಾಮ : ಅಯೋಧ್ಯೆಯ ರಾಜ

ಹನುಮಂತ : ರಾಮನ ಭಂಟ

ಗೌತಮ : ಒಬ್ಬ ಮುನಿ

ವ್ರಿಹಿಗ : ಒಂದು ಧಾನ್ಯ.
ಬತ್ತ–ನೆಲ್ಲು ಎಂಬ ಮತ್ತೆರಡು ಬಗೆಯ ಹೆಸರಿನಿಂದಲೂ ಕರೆಯುತ್ತಾರೆ.

ನರೆದಲೆಗ : ಒಂದು ಧಾನ್ಯ.
ರಾಗಿ ಎಂಬ ಮತ್ತೊಂದು ಹೆಸರಿನಿಂದಲೂ ಕರೆಯುತ್ತಾರೆ.

ಜಂಭಾರಿ : ದೇವತೆಗಳ ಒಡೆಯನಾದ ದೇವೇಂದ್ರ

ನಾರದ : ಒಬ್ಬ ದೇವತೆ

ಕಪಿಲ : ಒಬ್ಬ ಮುನಿ.

ಕೆಲವರು : ನರೆದಲೆಗ ಮತ್ತು ವ್ರಿಹಿಗ ಧಾನ್ಯಗಳ ನಡುವೆ ಮಾತಿನ ಜಗಳ ಉಂಟಾದ ಸನ್ನಿವೇಶದಲ್ಲಿ ಇದ್ದ ವಾನರರು, ಅಸುರರು, ಮುನಿಗಳು, ದೇವತೆಗಳು.

ರಾಮಧಾನ್ಯ ಪ್ರಸಂಗ

ನೋಟ–೧

ಲಂಕೆಯಲ್ಲಿ ನಡೆದ ಕಾಳಗದಲ್ಲಿ ರಾಮನು ರಾವಣನನ್ನು ಕೊಂದು, ಅಶೋಕವನದಲ್ಲಿ ಸೆರೆಯಾಗಿದ್ದ ಸೀತಾದೇವಿಯನ್ನು ರಣರಂಗಕ್ಕೆ ಕರೆಸಿಕೊಂಡು, ಅಯೋಧ್ಯಾ ನಗರದತ್ತ ಹೊರಡಲು ಸಿದ್ಧನಾಗಿ, ತನಗೆ ಇದುವರೆಗೂ ನೆರವಾಗಿದ್ದ ರಾವಣನ ತಮ್ಮನಾದ ವಿಭೀಷಣನನ್ನು ಕುರಿತು ಈ ರೀತಿ ಹೇಳುತ್ತಾನೆ.

ರಾಮ : ನೀನು ಪುರಕೆ ಪ್ರಯಾಣವ ಮಾಡು.

(ಎನ್ನಲು, ಆಗ ವಿಭೀಷಣನು ಲಂಕೆಯತ್ತ ತೆರಳದೆ ಅಯೋಧ್ಯೆಗೆ ರಾಮನನ್ನು ಬಿಟ್ಟು ಬರಲು ತನ್ನ ಪರಿವಾರದೊಡನೆ ಸಿದ್ಧನಾಗಲು...

ನಿಜ ಮಂತ್ರಿ ಕರಿ ರಥ ತುರಗ ಪಾಯ್ದಳವ ಕರೆಸಿದನು. ಆ ಕ್ಷಣವೆ ಅಗಣಿತ ವೀರದಾನವ ಸೇನೆ ನಿಮಿಷದಲಿ ನೆರೆದುದು. ವಿಭೀಷಣನು ಕುಬೇರನ ವರ ರಥವ ತರಿಸಿದ.

ಹರುಷದಲಿ ಮೇಳೈಸಿ ದೇವರ ಸಿರಿಪದಾಂಬುಜಕೆ ಅರ್ಪಿಸಲು, ಶ್ರೀರಾಮ ನಸುನಗುತ ಕರೆಸಿ ಲಕ್ಷ್ಮಣ ದೇವನನು ನಿಜ ತರುಣಿ ಸಹಿತ ವರೂಥವ ಏರಿದ. ತರಣಿಸುತ ಹನುಮಂತ ಜಾಂಬವರು ಒಗ್ಗಿನಲಿ ಐದಿತು. ಅಂಗದ, ನಳ, ನೀಲ, ಶತಬಲಿ, ತುಂಗ ವಿಕ್ರಮ ಸುಷೇಣ, ಪ್ಲವಂಗ, ಗವಯ, ಗವಾಕ್ಷ ಮೊದಲಾದ ಅಖಿಳ ವಾನರರು ಮಹಾಸಮರಂಗವೀರರು ಸಂಗಡಿಸಿ ನೆರೆದುದು. ಮೋಹಿಸಿದ ರಘುಪುಂಗವನ ರಥದೊಡನೆ ಮುಂದೆ ಸಂದಣಿಸಿ ನಡೆದುದು.

ಆ ವಿಭೀಷಣನೊಡನೆ ಲಂಕೆಯ ವೀರದಾನವ ಭಟರು, ಪುರಜನ, ಪೌರಜನ ಸಹಿತ ಮೇಳೈಸಿ ಭೂರಿಬಲವು

ಐತರುತಲಿರೆ, ರಣಭೇರಿ ಮಿಗೆ ದಂಧಣಾಧಣರೆನಲು, ಕಹಳೆಗಳು ಚೀರಿದವು. ದಿಕ್ಪಾಲಕರ ಬೆದರಿಸಿತು.

ಉಭಯಬಲ ತಡೆಯದೆ ಐತಂದು ಸಂಗಡಿಸಿ ಬರುತಿರೆ, ಮಡದಿಗೆ ಮುಂದೆ ಸೇತುವ ಎಲ್ಲವ ತೋರಿಸುತ ನೆರೆ ಕಡಲ ದಾಂಟಿದರು. ನೃಪತಿ ರಾಮೇಶ್ವರದ ಬಳಿಯಲಿ ನಡೆದು, ಮೃಡನ ಪೂಜಿಸಿ ಭಕ್ತಿಭಾವದ ಸಡಗರದಿ ವಾಲ್ಮೀಕಿಯಾಶ್ರಮಕೆ ಐದಿದನು. ಜಾನಕಿವಲ್ಲಭನು ಅಲ್ಲಿ ನೆರೆದ ಮಹಾಮುನೀಶ್ವರರೆಲ್ಲರನು ಸತ್ಕರಿಸಿ ಸಡಿಲದುನ್ನತ ಬಲಸಮೇತದಿ ಮುಚುಕುಂದನ ಆಶ್ರಮಕೆ ನಡೆತಂದನು. ಪಂಚನಂದಿಯೊಳು ಬಿಡದೆ ಪಲ್ಲೈಸಿರುವ ಫಲ ವಸ್ತುಗಳ ಕಡಲ ಸಂಭ್ರಮದಿ ಕಂಡನು.

ಆ ಮಹಾವನದೊಳಗೆ ಸುಭಟಸ್ತೋಮವು ಇಳಿದುದು. ಪಾಳೆಯದ ಸಂಗ್ರಾಮದ ಇದಿರಲಿ ಗುಡಿಗುಡಾರಂಗಳು ವಿರಾಜಿಸಿತು. ರಾಮಣೀಯಕ ರಚನೆಯಲಿ ಸುತ್ರಾಮನ ಓಲಗದಂತೆ ರಘುಕುಲ ರಾಮನು ಐದಿರೆ, ಸಕಲ ಮುನಿವರರು ಬಂದು ಕಂಡರು. ಕೌಶಿಕ, ಜಮದಗ್ನಿ, ಜನ್ಹು, ಪರಾಶರ, ಜಾಬಾಲಿ, ಭೃಗು, ದೂರ್ವಾಸ, ಗೌತಮನಾದಿಯಾದ ಸಮಸ್ತ ಮುನಿವರರು ಭಾಸುರದ ತೇಜದಲಿ ತಮ್ಮ ನಿವೇಶನವ ಹೊರವಂಟು ಬಂದರು. ದಾಶರಥಿಯನು ಕಂಡು ಅಕ್ಷತೆಯ ತಳಿದು ಹರಸಿದರು.)

ಮುನಿಗಳು : **ರಾಮ...ದಶರಥ ತನಯ...ರಘುಕುಲ ಸೋಮ...ಸನ್ನುತ ಸನಾಮ...ಆಹವ ಭೀಮ...ಸುಜನಪ್ರೇಮ...ಜಗದಭಿರಾಮ ...ನಿಸ್ಸೀಮ...ತಾಮರಸದಳ ನಯನ...ದೇವ ಪ್ರೇಮ...ಸುರಕುಲ ಮೌಳಿವಂದಿತ ಪ್ರೇಮದಿಂದಲಿ ಪಾಲಿಸು.**

(ಎನ್ನುತಲಿ ಅವರು ಪೊಗಳಿದರು. ಮುನಿಗಳು ತಮ್ಮ ಮಾತನ್ನು ಮುಂದುವರಿಸುತ್ತಾ...)

ಮುನಿಗಳು : **ದೇವ, ನೀವು ದೇವಿ ಜಾನಕಿಸಹಿತ ವನದಲಿ ಕಷ್ಟವ ಬಳಸಿ, ಭಕ್ತರ ಕಾವ ಹದನನು ನೆನೆದು, ವಾನರ ಬಲಸಮೇತದಲಿ**

ರಾವಣನ ಸಂಹರಿಸಿ, ಲಂಕೆಯನು ಆ ವಿಭೀಷಣಗೆ ಇತ್ತು, ನಮ್ಮನು ಪಾಲಿಸೆ ಬಂದೆ.

(ಎಂದು ನೃಪನ ಉಪಚರಿಸಿದರು.)

ರಾಮ : ನಮಗೆ ಉಪಚಾರವೇಕಿದು... ಸಾಕು, ಅದು ಅಂತಿರಲಿ. ನೀವು ಸಾರಹೃದಯರು. ನಮ್ಮನು ನಿಮ್ಮಡಿಯ ಕರುಣಾರಸವೆ ಸಲಹುವುದು. ಎಮಗೆ ಇಂದಿನಲಿ ನಿಮ್ಮ ದರುಶನ ಸೇರಿತು. ಇದು ಆರಿಗುಂಟು.

(ಎಂದು ಉಪಚಾರದಿಂದ ಸತ್ಕರಿಸಿ ಮುನಿವರರ ಕುಳ್ಳಿರಿಸಿದನು. ಇದಿರಲಿ ಮುನಿನಿಕರ, ಎಡದ ಕಡೆಯಲಿ ಕಪಿಕುಲೇಂದ್ರನ ಗಡಣ, ಬಲದಲಿ ರಾವಣಾನುಜ, ಹಿಂದೆ ವಾನರರು, ಮಡದಿ ಲಕ್ಷ್ಮಣ ದೇವರು ಇರ್ವರು, ಸಡಗರದಿ ಚಾಮರಂಗಳ ಬಿಡದೆ ಚಿಮ್ಮಲು, ಪೊಡವಿಪತಿ ಶ್ರೀರಾಮ ಸಿಂಹಾಸನದಿ ರಂಜಿಸಿದ.

ಅಲ್ಲಿ ನೆರೆದ ಮಹಾಮುನೀಶ್ವರರೆಲ್ಲ ರಾಮನೋಲಗಕೆ ಅಖಿಳ ವಸ್ತುವ ತರಿಸಿದರು. ಬೆಲ್ಲ ಸಕ್ಕರೆ ಜೇನುತುಪ್ಪ ರಸಾಯನಂಗಳಲಿ ಭುಲ್ಲವಿಸಿ ರಚಿಸಿದ ಸುಭಕ್ಷಗಳೆಲ್ಲವನು ಹೆಡಗೆಗಳಲ್ಲಿ ಜೋಡಿಸಿ ತುಂಬಿದರು. ಹೊರಿಸಿ ತಂದರು.

ಶಿಷ್ಯರು ತಂದು ಭಕ್ಷಗಳ ಮುದದಿಂದ ಸುರಿಯಲು, ರಘುಕುಲಸಾರ್ವಭೌಮನು ನೋಡಿ ನಸುನಗೆಯಿಂದ, ಕರೆಸಿ ನಿಜಬಲಕೆ ಅಂದು ಕೊಡಿಸಲು, ವಾನರರು ನೋಡಿದರು. ರುಚಿಯಿಂದ ಭೋಜ್ಯಗಳನು ಸವಿದರು. ಮುನಿವರರ ಆನಂದದಲಿ ಕೊಂಡಾಡಿದರು. ಆಗ ರಘುನಂದನನು ಕರುಣದೊಳು...)

ರಾಮ : ಅನಿಲಸುತ ಬಾರ. ಇವರ ರುಚಿ ಎಂತು.

(ಎನಲು, ಕರಗಳ ಮುಗಿದು ರಘುಪತಿಗೆ ಬಿನ್ನೈಸಿದನು.)

ಹನುಮಂತ : ಚಿತ್ತೈಸು ಇನಕುಲಾನ್ವಯತಿಲಕ, ಎನಗೆ ಸವಿಯಹುದು. ಇನ್ನು ಧಾನ್ಯದ ತನುವನು ಈಕ್ಷಿಸಬೇಕು. ದೇವರು, ನೀವು ತರಿಸಿ.

(ಎಂದ. ಆಗ ರಾಮನೃಪಾಲ ಗೌತಮ ಮುನಿಯನ್ನು ಕುರಿತು...)

ರಾಮ : ಧಾನ್ಯವನು ಈಕ್ಷಿಸಬೇಕು. ಸಲೆ ತರಿಸು.

(ಎನಲು, ಈ ಹದನ ಒಡನೆ ಆಲೋಚಿದರು. ಮನ ನಲಿದು, ತಂತಮ್ಮ ಶಿಷ್ಯರ ವಿನಯದಿಂದಲಿ ಕರೆಸಿ 'ತಾರ' ಎಂದೆನಲು, ತಳುವದೆ ಅವರನು ತಂದು ಸಭೆಯೊಳಗೆ ಮೆರೆದರು.)

ಗೌತಮ : ಇದು ನರೆದಲೆಗ...ಇದು ನೆಲ್ಲು...ಇದು ಹಾರಕ...ಇದು ಬರಗು...ಇದು ಜೋಳ...ಇದು ಕಂಬು...ಇದು ಸಾಮೆ...ಇದು ಉರುತರದ ನವಣೆ...ಇವು ನವಧಾನ್ಯ

(ಎಂದು ಎನಲು)

ರಾಮ : (ಮೆರೆವ ರಾಸಿಯ ಕಂಡು ಅರಸಿ...)

ಇದರೊಳು ಪರಮಸಾರದ ಹೃದಯನು ಆರು.

(ಎಂದು ಅಲ್ಲಿರುತಿಹ ಮಹಾಮುನೀಶ್ವರರ ಕೇಳಿದನು.)

ಕೆಲರು : ಗೋದಿ.

ಕೆಲರು : ಸಾಮೆ.

ಕೆಲರು : ನವಣೆ.

ಕೆಲರು : ಕಂಬು

ಕೆಲರು : ಜೋಳ.

ಕೆಲರು : ಹಾರಕ

ಕೆಲರು : ನೆಲ್ಲು.

ಕೆಲರು : ನರೆದಲೆಗ

(ಎಂದು ಪತಿಕರಿಸಲು, ಅದ ನೋಡಿದ ನೃಪತಿಯು...)

ರಾಮ : ಅದರೊಳು ಹಲವು ಮತವೇಕೆ. ಒಂದನೇ ಪೇಳಿ.

ಗೌತಮ : ದಾಶರಥಿ ಚಿತ್ತೈಸು, ನಮ್ಮಯ ದೇಶಕೆ ನರೆದಲೆಗನೇ ಅತಿಶಯ. ಈತ ವಾಸಿಯುಳ್ಳವನು. ಮಿಕ್ಕಿನ ಧಾನ್ಯವೇಕೆ.

(ಎನಲು)

ವ್ರಿಹಿಗ : (ತನ್ನ ಮನದಲ್ಲಿ)

ಲೇಸನಾಡಿದ ಮುನಿಪ ಗೌತಮ. ದೋಷರಹಿತನು ಈಸು ಪರಿಯಲಿ ಪಕ್ಷಪಾತವನು ಮಾಡುವರೆ!... ಶಿವ...

(ಎಂದುಕೊಂಡನು ವ್ರಿಹಿಗ. ಅನಂತರ ಗೌತಮ ಮುನಿಯನ್ನು ಕುರಿತು...)

ವ್ರಿಹಿಗ : ನೀವು ಎಲ್ಲ ಧರ್ಮದ ಸಾರವನು ಬಲ್ಲಿರಿ. ಇಲ್ಲಿ ನುಡಿವ ಉಪೇಕ್ಷೆಯುಂಟೇ. ಸಾಕು ಅದಂತಿರಲಿ. ನೆಲ್ಲು ನಾನಿರೆ, ಗೋದಿ ಮೊದಲಾದೆಲ್ಲ ಧಾನ್ಯಗಳಿರಲು, ನೀವು ಎಲ್ಲರನು ಅರಿಯದೆ, ಇದರಲಿ ಬಲ್ಲಿದನು ನರೆದಲೆಗನು ಎಂಬುದು ಇದಾವ ಮತ.

(ಎಂದ. ಈಗ ನರೆದಲೆಗನತ್ತ ತಿರುಗಿ..)

ವ್ರಿಹಿಗ : ಏನೆಲವೊ ನರೆದಲೆಗ... ಎನಗಿಲ್ಲಿ ನೀನು ಸಮಾನನೇ... ನಮ್ಮನು... ಇಬ್ಬರ ಹೆಚ್ಚು ಕುಂದುಗಳ ದಾನವಾಂತಕ ಬಲ್ಲನ್... ಜಾನಕಿ ಪತಿಯ ಸನಿಹದಲಿ ನೀನು ಕುಲಹೀನ...ಪ್ರತಿಷ್ಠ ಸುಡು... ಮತಿಹೀನ ನೀನು.

(ಎಂದೆನುತ ಖತಿಯಲಿ ಬೈದು ಭಂಗಿಸಿದ.)

ಲೋಕದಲಿ ಅಧಿಕ ಭೋಜನವು ಇದೆಂದು ಆಕೆವಾಳರು ಬುಧರು ಜರೆದು ನಿರಾಕರಿಸಿ ಬಿಡಲು, ಅಂತು ನೀ ಶೂದ್ರಾನ್ನವಾದೆಯಲ... ನಾಕನಿಳೆಯರು ಸಾಕ್ಷಿ...ನಿನ್ನ ವಿವೇಕಿಗಳು ಮೆಚ್ಚುವರೆ...ಬಾಹಿರ, ಸಾಕು ನಡೆ...ನೀನಾವ ಮಾನ್ಯನು. ಕಡೆಗೆ ತೊಲಗು...

ಕ್ಷಿತಿಯ ಅಮರರ ಉಪನಯನದಲಿ...ಸುವ್ರತ ಸುಭೋಜನ ಪರಮ ಮಂತ್ರಾಕ್ಷತೆಗಳಲಿ...ಶುಭಶೋಭನದಲಿ...ಆರತಿಗೆ ಹಿರಿಯರಲಿ...ಕ್ರತುಗಳೆಡೆಯೊಳಗೆ ಅರಮನೆಯಲಿ...ಪ್ರತಿದಿನವು ರಂಜಿಸುತ ದೇವರಿಗೆ ಅತಿಶಯದ ನೈವೇದ್ಯ ತಾನಹೆನ್...

ಜನಪರಿಗೆ...ಶಿಶುಗಳಿಗೆ...ಬಾಂಧವ ಜನರೆಡೆಗೆ...ಬ್ರಹ್ಮರ ಸಮಾರಾಧನೆಗೆ...ವಿದ್ಯಾರಂಭ ಕಾಲಕೆ...ಸಕಲ ಭೂಸುರರ ಮನೆಗಳಲಿ...ಹರಿದಿವಸದ ಔಪಾಸನೆಗಳಲಿ ತಾ ಯೋಗ್ಯನಹುದು ಎಂದು ಎನಿಸಿಕೊಂಬೆನು...ನೀನು ಅಯೋಗ್ಯನು. ಭ್ರಷ್ಟ ತೊಲಗು...

ಹೊಸ ಮನೆಯ ಪುಣ್ಯಾರ್ಚನೆಗೆ...ಮಿಗೆ ಎಸೆವ ಸೇಸೆಗೆ... ಮದುಮಕ್ಕಳಿಗೆ...ವಸುಮತೀಶರ ಗರುಡಿಯಲಿ ಶಸ್ತ್ರಾಸ್ತ್ರದ ಅರ್ಚನೆಗೆ...ಎಸೆವ ವಿಪ್ರರ ಫಾಲದಲಿ ರಂಜಿಸುವ ಗಂಧಾಕ್ಷತೆ ಅಹೆನು...

ಭಾವಿಸಲು ಲೋಕದೊಳು ಇಂತು ಆರು ಸರಿ... ಧರಣಿಯ ಅಮರರು ಮಂತ್ರ ತಂತ್ರೋಚ್ಚರಣೆಯಲಿ ಹಸ್ತಾಂಬುಜದಿ ಮಿಗೆ ಹರಸಿ ಕೊಡಲು, ಅಕ್ಷತೆಯ ಮಂಡೆಯೊಳು ಆಂತ ಮಹಿಮರಿಗೆ ದುರಿತ ದುಃಖ ವಿನಾಶ ಮಂಗಳಕರವಹುದು...ಸಂತತ ಸಿರಿಯ ಸಂಪತ್ತಾಯುವನು ತಾನು ಈವೆ...

ಪರಿಮಳದ ಚಂದನದ ತರುವಿಗೆ ಸರಿಯೆ ಒಣಗಿದ ಕಾಷ್ಠ...ಗೋವದು ಕರೆದ ಹಾಲಿಗೆ ಕುರಿಯ ಹಾಲಂತರವೆ... ಭಾವಿಸಲು ಪರಮ ಸಾಹಸಿ ವೀರ ಹನುಮಗೆ ಮರದ ಮೇಲಣ ಕಪಿಯು ತಾನಂತರವೆ...ಛಡ, ನೀನು ಎನಗೆ ಸರಿಯೇ...ಭ್ರಷ್ಟ ತೊಲಗು...

ಸುರನದಿಗೆ ತಾ ಸರಿಯೆ ಕಾಡೊಳು ಹರಿವ ಹಳ್ಳದ ನೀರು...ಗರುಡನ ಮರಿಗೆ ಹದ್ದಂತರವೆ...ಹಂಸಗೆ ಬಕನು ಹೋಲುವುದೆ...ಸರಸ ಮರಿ ಕೋಗಿಲೆಗೆ ವಾಯಸನು ಅಣಕಿಸುವ ತೆರನಾಯ್ತು...ಸಾಕಿನ್ನು ನರೆದಲೆಗ, ನೀನಾವ ಮಾನ್ಯನು ಕಡೆಗೆ ತೊಲಗು.

(ಎಂದ. ಸಭೆಯಲಿ ನುಡಿಯ ಕೇಳುತ, ನರೆದಲೆಗ ಕನಲಿ ಕಂಗಳು ಕಿಡಿಮಸಗಿ ಖತಿಗೊಂಡು ಸಿಡಿಲ ಘರ್ಜನೆಯಂತೆ ನುಡಿದನು. ವ್ರಿಹಿಯ ಜರೆದನು...)

ನರೆದಲೆಗ : ನುಡಿಗೆ ಹೇಸದ ಭಂಡ...ನಿನ್ನೊಳು ಮಾರುತ್ತರವ ಕೊಡುವರೇ.. ಕಡುಜಡನಲಾ...ನಿನ್ನೊಡನೆ ಮಾತೇಕೆ....ಸತ್ಯಹೀನನು...ಬಡವರನು ಕಣ್ಣೆತ್ತಿ ನೋಡೆ...ಧನಾಢ್ಯರನು ಬೆಂಬತ್ತಿ ನಡೆವ ಅಪೇಕ್ಷೆ ನಿನ್ನದು...ಅದನು ಹೇಳಲೇನು...

ಹೆತ್ತ ಬಾಣಂತಿಯರು ರೋಗಿಗೆ ಪತ್ಯ ನೀನಹೆ...ಹೆಣದ ಬಾಯಿಗೆ ತುತ್ತು ನೀನಹೆ...ನಿನ್ನ ಜನ್ಮ ನಿರರ್ಥಕರ...ಸತ್ತದಿನದಾರಭ್ಯ

ಮನುಜರು ಮತ್ತೆ ಕರ್ಮವ ಹೊತ್ತು, ಪಿಂಡವನಿತ್ತು, ತಪ್ಪದೆ ಮತ್ತೆ ವಾಯಸ ಕುಲವ ಕರೆಕರೆದು ತುತ್ತನಿಡುವರು. ಎಳ್ಳು ದರ್ಭೆಗೆ ತೆತ್ತಿಗನು ನೀನಾದೆ...ಕೀರ್ತಿಯ ಹೊತ್ತುಕೊಂಡೆ...

ದುರಾತ್ಮ, ನಿನ್ನೊಳು ಮಾತು ಅದೇಕೆ...ಮಳೆ ತೆಗೆದು ಬೆಳೆ ಅಡಗಿ ಕ್ಷಾಮದ ವಿಲಯಕಾಲದೊಳು ಅನ್ನವಿಲ್ಲದೆ ಅಳಿವ ಪ್ರಾಣಿಗಳ ಜಗವರಿಯೆ ಆದರಿಸಿ ಸಲಹುವೆನು...ಎಲವೊ, ನೀನು ಎಲ್ಲಿಹೆಯೊ...ನಿನ್ನಯ ಬಳಗವದು ತಾನು ಎಲ್ಲಿಹುದು...ಈ ಹಲವು ಹುಲು ಧಾನ್ಯಗಳು ಎನಗೆ ಸರಿದೊರೆಯೆ...

ಕೇಳು, ಬಲ್ಲಿದರು ಬರೆ, ಬಡವರಲಿ ನಿನ್ನಲ್ಲಿಯುಂಟು ಉಪೇಕ್ಷೆ...ನಮ್ಮಲಿ ಸಲ್ಲದು. ಈ ಪರಿ ಪಕ್ಷಪಾತವದಿಲ್ಲ...ಭಾವಿಸಲು ಬಲ್ಲಿದರು ಬಡವರುಗಳೆನ್ನದೆ ಎಲ್ಲರನು ರಕ್ಷಿಸುವೆ...ನಿನ್ನಂತೆ ತಾ ನಿರ್ದಯನಲ್ಲ...ಎಲೆ ಕುಟಿಲಾತ್ಮ, ಹೋಗು...

ವ್ರಿಹಿಂಗ : ನಾನೆಲ್ಯೆ, ಲೋಕದಲಿ ನಿರ್ದಯನು...!

ನರೆದಲೆಗ : ಬಳಿಕೇನಲ್ಯೆ...ಸದ್ಧರ್ಮದಲಿ ಮಧುಪಾನವಾದೆಯಲಾ...ದುರಾತ್ಮಕ, ನಿನ್ನ ಸೇವಿಸಿದ ದಾನವರು ಮಾನವರು ಕಿರಾತರು ಜ್ಞಾನವಳಿದು ವಿಕಾರದಲಿ ಮತಿಹೀನರಾದರು...

ಸತ್ತವರ ಪ್ರತಿಬಿಂಬರೂಪನು ಬಿತ್ತರಿಸಿ ಪಿತೃನಾಮಗಳ ನಿನಗಿತ್ತು, ಮೂವರ ಪೆಸರಿನಲಿ ಕರೆಕರೆದು ದರ್ಭೆಯಲಿ ನೆತ್ತಿಯನು ಬಡಿಬಡಿದು, ಕಡೆಯಲಿ ಪಶುಗಳಿಗೆ ತುತ್ತನಿಡುವರು...ನೀನು ಎತ್ತಿದೆಯೆಲಾ. ತನುವ ಸುಡಬೇಕು.

ನಿನ್ನ ಗುಣವೇನು... ಆಡಬಹುದೆ ಅತಿಶಯವ...ನೀ ಕೊಂಡಾಡಿ ಕೊಂಬರೆ...ಸಾಕು...

(ಎಂದ ನರೆದಲೆಗ. ಅನಂತರ ಸಭೆಯಲ್ಲಿ ಇದ್ದವರನ್ನು ಕುರಿತು)

ನರೆದಲೆಗ : ನೋಡಿರೈ ಸಭೆಯವರು... ದುರ್ಮತಿಗೇಡಿ, ಇವನು ಆಡುವುದ ನಾವು ಇನ್ನಾಡಿದರೆ ಹುರುಳಿಲ್ಲ ಶಿವಶಿವ...

ಸಜ್ಜನರಾಡಿದರೆ, ಪತಿಕರಿಸೆ ಲಜ್ಜೆಗೆ ಸಿರವ ಬಾಗುವರು...

(ಎಂದು ನರೆದಲೆಗನು ನುಡಿದಾಗ, ಸಭೆಯಲ್ಲಿದ್ದವರು ಏನನ್ನೂ ಮಾತನಾಡದೆ ಸುಮ್ಮನಿರುವುದನ್ನು ಕಂಡು ನರೆದಲೆಗನು ಮತ್ತೆ ಮಾತನ್ನು ಮುಂದುವರೆಸುತ್ತಾನೆ.)

ಹಿರಿ ಕಿರಿದ ನುಡಿಯುದೆ ಏನ್ ಇಹಿರಿ...ಕಂಡು ಮೌನದೀಕ್ಷಿತರಾದಿರಲ...ಏನು ಮುರಿದಾಡುವಿರಿ...ನಿಮಗೆ ಅಸಾಧ್ಯವೊ ಸಾಧ್ಯವೋ...ಈ ನಪುಂಸಕನಲಿ ಏನು ಕಾರಣ ನಿರಂತರ ವಾದವಿದು. ಪೇಳಿ, ನಮಗೇನು ಬುದ್ಧಿಯನು ಅರುಹುವಿರಿ.

(ಎಂದ ನರೆದಲೆಗ. ಇತ್ತಂಡಕ್ಕೆ ಮತ್ಸರ ಮಸೆದುದು. ಪಿಸುಣ ಬಲರು, ಅತಿ ನಿಷ್ಠುರರು ವಾದಿಸಲು ನೃಪತಿ ಕಂಡನು. ನೋಡಿ ನೃಪತಿ ಮನದಲಿ ನಸುನಗುತ...)

ರಾಮ : (ತನ್ನ ಮನದಲ್ಲಿ)

ಹಿಸುಣರು. ಇವದಿರ ಮತ್ಸರವ ಮಾಣಿಸುವ ಹದನೇನು.

(ಎನುತ ಯೋಚಿಸಿದ. ಅಸುರ, ಮುನಿಪರ ನೋಡೆ...ಗೌತಮ ಮುನಿಪನು ಇಂತು ಎಂದ.)

ಗೌತಮ : **ನೆರೆದಿಹ ಅರಸುಗಳು, ಭೂಮೀ ಸುರರು, ದಾನವರು, ವಾನರರು ನಾವೆಲ್ಲ ನಮಗೆ ಈ ನ್ಯಾಯವನು ಪರಿಹರಿಸಲು ಅಳವಲ್ಲ. ಅಯೋಧ್ಯೆಗೆ ಹರಿಹರವಿರಿಂಚಾದ್ಯರನು ಕರೆಸುವೆವು. ಇವರ ಗುಣವ ನಯದೊಳು ಆಧರಿಸಿ ಪೇಳ್ವರು.**

(ಎಂದನು. ಆಗ ರಾಮ ನಸುನಗುತ.)

ರಾಮ : **ಕೇಳ್, ಪರಮ ಧಾನ್ಯದೊಳು ಇಬ್ಬರೇ ಇವರು ಆರು ತಿಂಗಳು ಸೆರೆಯೊಳಗೆ ಇರಲಿ. ಹಿರಿದು ಕಿರಿದು ಎಂಬ ಇವರ ಪೌರುಷವ ಅರಿಯಬಹುದು. ಇನ್ನು ಪುರಕೆ ಗಮನಿಸಿ. ನಾವು ನಿಮ್ಮನು ಕರೆಸುವೆವು.**

(ಎನುತ ಆ ವಿಭೀಷಣಗೆ ಅಯೋಧ್ಯಾಪುರಿಗೆ ಪಯಣವ ಮಾಡಹೇಳಿದನು.)

ನರೆದಲೆಗ : ಸೆರೆಗೆ ನಮ್ಮನು ನೂಕಿ... ಎಮ್ಮನು ಮರದು...ದೇವರು, ಸಿರಿಯ ಮದದಲಿ ಕಳೆದರೆ...ನಿಮ್ಮಯ ಕರುಣ ಹೊರತಾಗಿ ಆರು ಸಲಹುವರು. ಧರೆಯೊಳು ಇನ್ನು ಅಪಕೀರ್ತಿ ನಾರಿಯ ಸೆರಗ ಹಿಡಿವುದೆ ಲೇಸು.

(ಎನುತ ತವೆ ಕರಮುಗಿದು ತಲೆಗುತ್ತಿ ಪೇಳಿದನು.)

ರಾಮ : ಆಗಲಿ ಅದಕೇನು.

(ಎಂದು ಕರುಣಾ ಸಾಗರನು ಬೀಳ್ಕೊಟ್ಟನು. ಅವರನು ಯೋಗಿಗಳ ವಶಮಾಡಿ ಗೌತಮಮುನಿಯನು ಉಪಚರಿಸಿ, ರಾಗ ಮಿಗೆ ಮುನಿವರರನಲ್ಲಿ ಸರಾಗದಿಂದಲೆ ಕಳುಹಿ, ಬಳಿಕ ಆ ಯಾಗಸಂರಕ್ಷಕನು ಅನಿಬರಿಗೆ ವೀಳೆಯವಿತ್ತನು.)

□□

ನೋಟ-೨

ಇತ್ತ ರಾಮನು ತನ್ನ ಪರಿವಾರದೊಡನೆ ಅಯೋಧ್ಯೆಗೆ ಬಂದು ಪಟ್ಟಾಭಿಷಕ್ತನಾಗುತ್ತಾನೆ. ಆರೇಳು ತಿಂಗಳುಗಳ ನಂತರ ಮುಚುಕುಂದ ಮುನಿಯ ಆಶ್ರಮದಲ್ಲಿ ನಡೆದಿದ್ದ 'ನರೆದಲೆಗ ಮತ್ತು ವ್ರಿಹಿಗ' ಪ್ರಸಂಗವನ್ನು ರಾಮನು ನೆನಪಿಸಿಕೊಂಡು, **"ಅವರಲ್ಲಿ ಯಾರು ಗಟ್ಟಿಗರು ಮತ್ತು ಯಾರಿಂದ ಜನಸಮುದಾಯಕ್ಕೆ ಹೆಚ್ಚಿನ ಉಪಯೋಗವಾಗುತ್ತಿದೆ"** ಎಂಬುದನ್ನು ತೀರ್ಮಾನಿಸಲೆಂದು ಒಂದು ದಿನ ತನ್ನ ಒಡ್ಡೋಲಗದಲ್ಲಿ ಈ ಸಂಗತಿಯನ್ನು ಪ್ರಸ್ತಾಪಿಸುತ್ತಾನೆ.

ರಾಮ : **ಕೇಳು ಲಕ್ಷ್ಮಣ...ಕೇಳು ಜಾಂಬವ...ಕೇಳು ನಳ...ನೀಲಾದಿ ಸುಭಟರು ಕೇಳಿರೈ...ನರೆದಲೆಗ ವ್ರಿಹಿಯರು ಸೆರೆಯೊಳು ಇರ್ದರು. ಅವರ ಕಾಲ ಸವೆದುದು. ದಿವಸವು ಇಂದಿಗೆ ಏಳು ತಿಂಗಳು ಕಳೆದವು. ಅವದಿರ ಪಾಲಿಸಲು ಬೇಕು. ಅನಿಲಸುತ, ನೀ ಕರೆದು ತಾರ.**

ಹನುಮಂತ : **ಹೈ...ಹಸಾದ.**

(ಎನುತ್ತ ವಂದಿಸೆ, ನಿರ್ವಾಹದಲಿ ಬಾಹುಬಲದ ಅಗ್ಗಳಿಕೆ ಮಿಗೆ, ಅತಿ ವೇಗದಲಿ ಪಥವಿಡಿದು ಹೊರವಂಟನು. ವಜ್ರದ ದೇಹನಲ್ಲಾ ಹನುಮ. ಸಾಹಸವನು ಏನೆಂಬೆ, ತನ್ನ ಮನೋಹರದ ಪಂಚನಂದಿಯಲಿ ಋಷಿಗಳನು ಕಂಡನು. ಅವರ ಪದಾಂಬುಜಕೆ ವಂದಿಸಿ ಪವನಸುತ ಬಿನ್ನೈಸಿದನು.)

ಹನುಮಂತ : **ರಾಘವ ನೃಪಾಲನು ಕಳುಹೆ ನಿಮ್ಮ ದರುಶನಕೆ ಬಂದೆನು. ಅವಧಿ ಸವೆದುದು. ಸೆರೆಮನೆಯೊಳು ಇರ್ದವರನು ಒಡಗೊಂಡು ಈ ಕ್ಷಣವೆ ನೀವು ಅವನಿಪನ ಸಂಮುಖಕೆ ಚಿತ್ತೈಸಿ.**

(ಎಂದು ಕೈಮುಗಿದ. ಹನುಮನು ಆಡಿದ ನುಡಿಗೆ ಗೌತಮ

ಮುನಿಪ ನಸುನಗುತ ಎದ್ದು, ಬನದಲಿ ಘನತಪೋಬಲ ಮಹಿಮರನು ಕರೆಸಿದನು. ಮನದಿ ಹರುಷಿತನಾಗಿ ಮುನಿ ಸೆರಮನೆಯ ಪ್ರತಿವಾದಿಗಳನು ಒಡಗೊಂಡು ಅನುಪಮಿತ ಗುಣನಿಲಯ ಮುನಿ ಅತುಳವೇಗದಲಿ ಆಶ್ರಮವ ಹೊರವಂಟನು. ಅತಿಹರುಷದಲಿ ಬಂದನು. ಮುನಿಕುಲವೃಂದದೊಡನೆ ಐತರಲು, ರಘುಕುಲನು ಅಂದು ಬಿಜಯಂಗೈಸೆ ರಾಜಮಂದಿರಕೆ ತಂದನು.)

ರಾಮ : **ಪ್ರತಿವಾದಿಗಳು ಬಂದರೇ. ನೀವು ಕರೆತಂದಿರೇ.**

(ಎನುತ ಮುನಿಕುಲವೃಂದವನು ಸತ್ಕರಿಸಿ ಗೌತಮನ ಕುಳ್ಳಿರಿಸಿದನು. ಇವರ ವ್ಯವಹಾರವನು ಪರಿಹರಿಸುವ ವಿಚಾರವ ನೋಡಿ, ರವಿಕುಲಾನ್ವಯ ರಾಮ ಹೃದಯ ಶುದ್ಧಿಯಲಿ ಮನದಲಿ ನೆನೆದನು. ಶಿವನ ಧ್ಯಾನಿಸಲು ಆ ಕ್ಷಣವೆ ತ್ರೈಭುವನಕರ್ತರು ಇಂದ್ರ ಮೊದಲಾದವರು ಅಯೋಧ್ಯಾಪುರ ಪತಿಧಾಮನ ಓಲಗಕೆ ಬಂದರು. ವಸುಗಳು, ಅಮರರು, ಭುಜಂಗಾಮರರು, ಅಸುರ, ಕಿನ್ನರ, ಯಕ್ಷ, ರಾಕ್ಷಸ, ಶಶಿರವಿಗಳ್, ಆದಿತ್ಯ ವಿದ್ಯಾಧರರು, ಗುಹ್ಯಕರು, ವಸುಧೆಯ ಅಮರರು, ಕ್ಷತ್ರಿಯರು, ಜೋಯಿಸರು, ವೈಶ್ಯ ಚತುರ್ಥರು, ಉನ್ನತ ಕುಶಲ ವಿದ್ಯಾಧಿಕರು ನೃಪನ ಸಭೆಯೊಳಗೆ ನೆರೆದುದು. ಇಂತೆಸೆವ ಆ ಸಭೆಯೊಳಗೆ ಮತಿವಂತ ನುಡಿದನು.)

ರಾಮ : **ಧಾನ್ಯವರ್ಗದ ಸಂತತಿಯ ಬರಹೇಳಿ.**

(ಎನೆ, ಸೆರೆಮನೆಯೊಳು ಇರ್ದವರು ನಿಂತು ಕರಗಳ ಮುಗಿದು...)

ನರೆದಲೆಗ : **ಧರಣೀಕಾಂತ ರಘುವರನು ಈ ಸುಬುದ್ಧಿಯನು ಎಂತು ನಮಗೆ ಅರುಹುವಿರಿ ಅದ ಪೇಳಿ.**

(ಎನಲು...ರಾಮನೃಪಾಲ ನೋಡಿದ...ಘನ ತಪೋಮಹಿಮರಿಗೆ ನುಡಿದನು.)

ರಾಮ : **ಮನವ ವಂಚಿಸಲಾಗದು. ಈ ಧರ್ಮವನು ನೆರೆ ತಿಳಿದು**

ಅನುನಯದಿ ಪೇಳಿ.

(ಎನೆ, ಮುನೀಂದ್ರರು ಅನಿಮಿಷರನು ಈಕ್ಷಿಸಿದರು.

ಅಲ್ಲಿದ್ದವರಲ್ಲಿ ಯಾರೊಬ್ಬರೂ ಏನನ್ನೂ ಹೇಳದೆ ಸುಮ್ಮನಿರುವುದನ್ನು ಕಂಡು...

ಅಲ್ಲಿಯ ಘನ ಮಹಾಸಭೆಯೊಳಗೆ ಭಾರ್ಗವ ರಾಮನು ಇಂತು ಎಂದ.)

ರಾಮ : ಆರು ನುಡಿಯರೆ...ನೀವು ಹಿರಿಯರು...ಇವರೊಳಗೆ ಆರು ಮೀರಿಸುವರು...ಗುಣಸಾರವನು ಪೇಳಿ.

ಜಂಭಾರಿ : (ನಸುನಗುತ)

ಸಾರಹೃದಯನು ನರೆದಲೆಗ. ನಿಸ್ಸಾರನು ಈ ವ್ರಿಹಿ.

(ಎನಲು, ಗುಣನಿಧಿ ಮಾರುತಾತ್ಮಜ ಸನ್ನೆಯಲಿ ನಾರದನ ನೋಡಿದನು.)

ನಾರದ : ಅಹುದು, ಸುರಪನ ಮಾತು ನಿಶ್ಚಯವಹುದು. ನರೆದಲೆಗನೆ ಸಮರ್ಥನು. ಬಹಳ ಬಲಯುತ. ಸೆರೆಗೆ ತಳ್ಳಲು ಕಾಂತಿಗೆಡಲಿಲ್ಲ. ಸಹಜವಿದು. ಪರಪಕ್ಷವಾದಡೆ ವ್ರಿಹಿ ಕರಗಿ ಕಂದಿದನು. ಸೆರೆಯಲಿ ವಿಹಿತವದು ಕೇಳು.

(ಎಂದು ನಾರದ ನುಡಿದ ನಸುನಗುತ.)

ಕಪಿಲ ಮುನಿ : ಎಲ್ಲ ನವಧಾನ್ಯದಲಿ ಈತನೆ ಬಲ್ಲಿದನು, ಹುಸಿಯಲ್ಲ. ಬಡವರ ಬಲ್ಲಿದರನು ಆರೈದು ಸಲಹುವನು. ಇವಗೆ ಸರಿಯುಂಟೆ. ನೆಲ್ಲಿನಲಿ ಗುಣವೇನು... ಭಾಗ್ಯದಿ ಬಲ್ಲಿದರ ಪತಿಕರಿಸುವನು. ಅವನಲ್ಲಿ ಸಾರವ ಕಾಣೆ.

(ಎಂದನು ಕಪಿಲಮುನಿ ನಗುತ. ಸುರಮುನಿಗಳು ಇಂತು ಎನಲು, ಭೂಸುರವರರು ಸಭಿಕರು ಸಂತೋಷಿಸಲು...)

ರಾಮ : ನರೆದಲೆಗೆ ನೀ ಬಾರ.

(ಎನುತ ರಾಮನೃಪಾಲ ನೆರೆ ಮೆಚ್ಚಿ ತನ್ನ ನಾಮವ ಕರೆದುಕೊಟ್ಟನು. ಧರೆಗೆ ರಾಘವನೆಂಬ ಪೆಸರಾಯ್ತು. ವ್ರಿಹಿ

ಇರದೆ ನಾಚಿದನು. ಸಭೆಯಲಿ ಶಿರವ ಬಾಗಿಸಿದ. ಹರುಷ ತೋರಿದ ಮನದಿ ನಲಿವುತ ನರೆದಲೆಗನು ಐತಂದು ರಾಮನ ಸಿರಿಚರಣಕೆ ಅಭಿನಮಿಸೆ, ದೇವಾಸುರರು ಕೊಂಡಾಡೆ, ಹರಸಿ ಮುತ್ತಿನ ಸೇಸೆಯನು ಭೂಸುರರು ಮಂತ್ರಾಕ್ಷತೆಯನು ಇತ್ತು ಉಪಚರಿಸಿದರು. ಅಲ್ಲಿ ಮುನಿವರರು ರಾಗಿಯನು ಪೊಗಳಿದರು.)

ವ್ರಿಹಿಗ : (ತನ್ನ ಮನದಲ್ಲಿ)

ಇಂತು ಸಭೆಯಲಿ ಮಾನಭಂಗವದು ತನಗೆ ಎಂತು ಬಂದುದು.

(ಎನುತ ಅತಿ ಚಿಂತೆಯಲಿ ಕಡುನೊಂದು ನೀರೊಳಗೆ ತಲೆಗುತ್ತಿದನು. ಇಂತು ಪರಿತಾಪದಲಿ...ಲಕ್ಷ್ಮೀಕಾಂತ... ಶಿವಶಿವ... ಎನುತಲಿರೆ, ಭೂಕಾಂತ ದಶರಥರಾಮನಾಥನು ಕರೆದು ಲಾಲಿಸಿದ.)

ರಾಮ : **ಬಾರೈ ವ್ರಿಹಿಯೆ, ಮರುಳೆ ಮನದಲಿ ಕೊರಗಿ ಚಿಂತಿಸಲೇಕೆ. ನಾವು ಈ ನರೆದಲೆಗನ ಅತಿಶಯವ ಮಾಡಿದೆವು ಎಂದು ಕನಲಿದೆಯ. ಧರೆಗೆ ಹೊದ್ದಿದ ಕ್ಷಾಮಗಾಲದಿ ಕರುಣದಿನ್ ನಡೆತಂದು ಲೋಕವ ಹೊರೆವನು. ಅದು ಕಾರಣವೆ ಪತಿಕರಿಸಿದೆವು.**

ಕೇಳು, ದೀನರಲಿ ದಾರಿದ್ರ ಜನದಲಿ ನೀನು ನಿರ್ದಯನು ಎಂದೆವಲ್ಲದೆ, ನಿನ್ನನು ನಾವು ಸಭೆಯೊಳಗೆ ಹೀನಗಳೆದವರಲ್ಲ. ಮಾನುಷನು ನಮ್ಮೆಡೆಗೆ ನೀ ಸುರಧೇನುವಿನ ಸಮ. ನಿನ್ನ ಚಿತ್ತದೆ ಹಾನಿ ತೋರಲು ಅದೇಕೆ...ಬಿಡು ಬಿಡು ಚಿಂತೆ ಯಾಕೆ...

ನೀ ದೇವರಿಗೆ ಪರಮಾನ್ನ. ಈತನು ಮನುಜಾವಳಿಗೆ ಪಕ್ವಾನ್ನಮ್.

ನೀವು ಧರೆಯೊಳಗೆ ಇಬ್ಬರು ಅತಿ ಹಿತದಲ್ಲಿ ಇಹುದು. ನಾವು ವರವ ಕೊಟ್ಟೆವು. ಆವ ಕಾಲದಲಿ ಸಲ್ಲುವುದು. ಇನ್ನು ನೀವೆ ಪರಮಸುಖಿ ಪಾವನರು.

(ಎಂದು ನೃಪತಿ ಉಪಚರಿಸಿದನು.)

□□

ರಾಮಧಾನ್ಯ ಪ್ರಸಂಗ ಓದು

ಪದ ವಿಂಗಡಣೆ ಮತ್ತು ಪದಗಳ ತಿರುಳು

ನೋಟ-೧

ಕನಕದಾಸರು ರಾಮಧಾನ್ಯ ಚರಿತ್ರೆಯನ್ನು ಶಾಂಡಿಲ್ಯ ಎಂಬ ಮುನಿಯು ಧರ್ಮರಾಯನಿಗೆ ಹೇಳಿದ ರೀತಿಯಲ್ಲಿ ನಿರೂಪಿಸಿದ್ದಾರೆ. ಪಾಂಡವರು ಹನ್ನೆರಡು ವರ್ಷ ವನವಾಸವಿದ್ದ ಸಂದರ್ಭದಲ್ಲಿ, ಅವರ ಬಳಿಗೆ ಬಂದ ಮುನಿಯು ರಾಮನ ಬದುಕಿನಲ್ಲಿ ನಡೆದ ಈ ಪ್ರಸಂಗವನ್ನು ಹೇಳುತ್ತಾರೆ. ರಾಗಿ ಮತ್ತು ಬತ್ತ ಧಾನ್ಯಗಳ ನಡುವೆ ಮೇಲು ಕೀಳಿನ ವಾಗ್ವಾದ ನಡೆದಾಗ, ಅವರ ನಡುವಣ ವ್ಯಾಜ್ಯವನ್ನು ರಾಮನು ಪರಿಹರಿಸಿ, ಇಬ್ಬರನ್ನು ಸಮಾಧಾನ ಪಡಿಸಿ ಹರಸಿದ ಪ್ರಸಂಗವನ್ನು ಧರ್ಮರಾಯನಿಗೆ ವಿವರಿಸಿ ಹೇಳುತ್ತಾರೆ.

ಈ ಪ್ರಸಂಗವನ್ನು ಹೇಳುವ ಮುನ್ನ ರಾಮನು ಅಯೋಧ್ಯಾನಗರದಲ್ಲಿ ದಶರಥ ಮತ್ತು ಕೌಸಲ್ಯೆಯರ ಮಗನಾಗಿ ಹುಟ್ಟಿ ಬೆಳೆದು, ಸೀತೆಯನ್ನು ಮದುವೆಯಾಗಿ, ಅನಂತರ ಕೈಕೆಯ ಕಾರಣದಿಂದಾಗಿ ವನವಾಸಕ್ಕೆ ಗುರಿಯಾಗಿ, ವನವಾಸ ಸಮಯದಲ್ಲಿ ಸೀತೆಯು ರಾವಣನಿಂದ ಅಪಹರಣಗೊಂಡಾಗ, ವಾನರ ಸೇನೆಯೊಡನೆ ರಾಮನು ಲಂಕೆಯ ಮೇಲೆ ದಂಡೆತ್ತಿ ಹೋಗಿ, ರಾವಣನನ್ನು ಕೊಂದು, ರಾವಣನ ತಮ್ಮನಾದ ವಿಭೀಷಣನಿಗೆ ಲಂಕೆಯ ರಾಜ ಪಟ್ಟವನ್ನು ಕಟ್ಟುವ ವರೆಗಿನ ಸಂಗತಿಗಳೆಲ್ಲವನ್ನೂ ಕೇವಲ ಏಳು ಪದ್ಯಗಳಲ್ಲಿ ಚಿತ್ರಿಸಿದ್ದಾರೆ.

ರಾಮನು ಸೀತೆ ಮತ್ತು ಲಕ್ಷ್ಮಣರೊಡನೆ ಅಯೋಧ್ಯೆಯತ್ತ ಹೊರಟಾಗ, ಅವರೊಡನೆ ಲಂಕೆಯ ರಕ್ಕಸ ಪರಿವಾರದ ಜತೆಗೂಡಿ ವಿಭೀಷಣ ಮತ್ತು ವಾನರ ಸೇನೆಯ ಮುಂದಾಳುಗಳಾದ ಸುಗ್ರೀವ, ಹನುಮಂತ ಮುಂತಾದವರೆಲ್ಲ ಹೊರಡುತ್ತಾರೆ. ಲಂಕೆಯಿಂದ ಅಯೋಧ್ಯೆಯತ್ತ ಬರುವಾಗ ಕಾಡಿನ ನಡುವೆ ಪಂಚನಂದಿ ಎಂಬ ಪ್ರಾಂತ್ಯದಲ್ಲಿದ್ದ ಮುಚುಕುಂದ ಮುನಿಯ ಆಶ್ರಮದಲ್ಲಿ ರಾಮನ ಪರಿವಾರದವರು ಬಿಡಾರ ಹೂಡುತ್ತಾರೆ. ಆಗ ಆಶ್ರಮವಾಸಿಗಳಾದ

ಮುನಿಗಳು ನವಧಾನ್ಯಗಳಿಂದ ತಯಾರಿಸಿದ್ದ ಉಣಿಸು ತಿನಸುಗಳನ್ನು ನೀಡಿ ರಾಮನನ್ನು ಸತ್ಕರಿಸುತ್ತಾರೆ.

ರಾಮನು ರುಚಿಕರವಾದ ಆಹಾರವನ್ನು ತನ್ನೊಡನೆ ಬಂದಿದ್ದ ವಾನರ ಮತ್ತು ರಕ್ಕಸ ಪರಿವಾರದವರಿಗೆ ಕೊಡಿಸಿದಾಗ, ಅವರೆಲ್ಲರೂ ಸಂತಸದಿಂದ ಉಂಡು ತಿಂದು ಸವಿದು ಮುನಿಗಳನ್ನು ಹಾಡಿಹೊಗಳುತ್ತಾರೆ. ಮುನಿಗಳು ನೀಡಿದ ರುಚಿಕರವಾದ ಉಣಿಸುತಿನಸುಗಳನ್ನು ಸೇವಿಸಿ ಆನಂದಗೊಂಡು ಮುನಿಗಳನ್ನು ಕೊಂಡಾಡುತ್ತಿದ್ದ ತನ್ನ ಪರಿವಾರದವರಲ್ಲಿ ಹನುಮಂತನನ್ನು ರಾಮನು ಮುಂದಕ್ಕೆ ಕರೆದು **"ಇಂತಹ ರುಚಿಕರವಾದ ಉಣಿಸುತಿನಸುಗಳಿಗೆ ಬಳಸಿದ ಧಾನ್ಯಗಳ ರುಚಿಯು ಹೇಗಿದೆ ಅವುಗಳ ಕಸುವು ಏನು?"** – ಎಂದು ಕೇಳಿದಾಗ, ಹನುಮಂತನು **"ಧಾನ್ಯಗಳ ಕಸುವನ್ನು ತಿಳಿಯಲು ಅವನ್ನು ಇಲ್ಲಿಗೆ ತರಿಸಬೇಕೆಂದು"** ವಿನಂತಿಸಿಕೊಳ್ಳುತ್ತಾನೆ.

ಮುನಿಗಳು ಅಡುಗೆಯನ್ನು ಮಾಡಲು ಬಳಸಿದ್ದ ನವಧಾನ್ಯಗಳೆಲ್ಲವನ್ನೂ ತರಿಸಿ, ರಾಮನಿಗೆ ಅವುಗಳ ಹೆಸರನ್ನು ಹೇಳಿದಾಗ, ರಾಮನು **"ಆ ಧಾನ್ಯಗಳಲ್ಲಿ ಜನರು ಹೆಚ್ಚು ಬಳಸುವ ಯಾವುದಾದರೂ ಒಂದು ಧಾನ್ಯದ ಹೆಸರನ್ನು ಹೇಳಿ"** ಎಂದಾಗ, ಗೌತಮ ಮುನಿಯು **"ನರೆದಲೆಗನೇ ಬಹಳ ಬೇಕಾದವನು"** ಎನ್ನಲು ಕುಪಿತಗೊಂಡ ವ್ರಿಹಿಗನು ನರೆದಲೆಗನನ್ನು ನಿಂದಿಸುತ್ತಾ, ತನ್ನನ್ನು ತಾನು ಹೊಗಳಿಕೊಂಡು **"ಜನಸಮುದಾಯಕ್ಕೆ ಯಾವ ಯಾವ ರೀತಿಯಲ್ಲಿ ತಾನು ಬಹಳ ಬೇಕಾದವನು"** ಎಂಬುದನ್ನು ವಿವರಿಸುತ್ತಾನೆ.

ವ್ರಿಹಿಗನ ನಿಂದನೆಯ ನುಡಿಗಳನ್ನು ಕೇಳುತ್ತಿದ್ದಂತೆಯೇ ಕೋಪದಿಂದ ಕೆರಳಿ ಮತ್ತು ಅಪಮಾನದಿಂದ ನೊಂದ ನರೆದಲೆಗನು ವ್ರಿಹಿಗನ ಅಹಂಕಾರವನ್ನು ಅಡಗಿಸುವಂತೆ ನಿಂದಿಸುತ್ತಾ **"ತಾನು ಹೇಗೆ ಜನಸಮುದಾಯದಲ್ಲಿ ಹೆಚ್ಚಿನ ಸಂಕೆಯಲ್ಲಿರುವ ಬಡಜನರ ಹಿತವನ್ನು ಕಾಪಾಡುತ್ತೇನೆ"** ಎಂಬುದನ್ನು ವಿವರಿಸಿ, ಅಲ್ಲಿ ನೆರೆದಿದ್ದ ಮುನಿಜನಗಳಲ್ಲಿ **"ತಮ್ಮಿಬ್ಬರಲ್ಲಿ ಯಾರು ಮೇಲು"** ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತಾನೆ.

ವ್ರಿಹಿಗ ಮತ್ತು ನರೆದಲೆಗರ ಪರಸ್ಪರ ತೆಗಳಿಕೆಯ ಮಾತುಗಳನ್ನು ಕೇಳುತ್ತಿದ್ದ ರಾಮನು ಇವರಿಬ್ಬರ ನಿಜವಾದ ಕಸುವನ್ನು ತಿಳಿಯಲು ಒಂದು ಆದೇಶವನ್ನು ಹೊರಡಿಸುತ್ತಾನೆ. **"ವ್ರಿಹಿಗ ಮತ್ತು ನರೆದಲೆಗನನ್ನು ಆರು ತಿಂಗಳ ಕಾಲ ಸೆರೆಯಲ್ಲಿಡಬೇಕೆಂದು, ಅನಂತರ ಇವರ ಕಸುವನ್ನು ನೋಡಿ, ತೀರ್ಮಾನಿಸೋಣ"**

ಎಂದು ಹೇಳಿ, ಅವರನ್ನು ಸೆರೆಯಲ್ಲಿಡಿಸಿ, ಅಯೋಧ್ಯೆಗೆ ಪರಿವಾರದೊಡನೆ ತೆರಳುತ್ತಾನೆ.

ಧಾನ್ಯಗಳನ್ನು ಸೆರೆಯಲ್ಲಿಡುವುದು ಎಂದರೆ 'ಕೊಟಡಿಯ ಕಿಟಕಿ ಬಾಗಿಲುಗಳನ್ನು ಮುಚ್ಚಿ, ಅವುಗಳ ಸಂದನ್ನು ಸಗಣಿಯಿಂದ ಸಾರಿಸಿ ಮುಚ್ಚಿ, ಬೆಳಕು ಮತ್ತು ಗಾಳಿಯ ಪ್ರವೇಶವಿಲ್ಲದಂತೆ ಮಾಡಿ ಕತ್ತಲ ಕೊಟಡಿಯಲ್ಲಿ ಧಾನ್ಯಗಳನ್ನು ಇಡುವುದು.' ಈ ರೀತಿ ಇಡುವ ಕೊಟಡಿಯನ್ನು 'ಕಣಜ' ಎಂದು ಕರೆಯುತ್ತಾರೆ.

ಪುರ=ಪಟ್ಟಣ/ಲಂಕಾ ನಗರ; ನಿಜ=ತನ್ನ; ತುರಗ=ಕುದುರೆ; ಪಾಯ್+ದಳ; ಪಾಯ್=ಮೇಲೆ ಬೀಳು/ಆಕ್ರಮಣ ಮಾಡು; ದಳ=ಪಡೆ/ಸೇನೆ; ಪಾಯ್ದಳ=ಕಾಲಾಳುಗಳ ದಂಡು; ಅಗಣಿತ=ಲೆಕ್ಕವಿಲ್ಲದ/ಅತಿ ಹೆಚ್ಚಾದ;

ದಾನವ=ರಾಕ್ಷಸ. ಹಿಂದಿನ ಕಾಲದಲ್ಲಿ ಕಾಡಿನಲ್ಲಿ ನೆಲೆಸಿದ್ದ ಬುಡಕಟ್ಟುಗಳ ಜನಸಮುದಾಯದಲ್ಲಿ ಒಂದು ಬುಡಕಟ್ಟನ್ನು 'ರಾಕ್ಷಸರು' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಲಂಕೆಯಲ್ಲಿದ್ದ ಈ ಬುಡಕಟ್ಟಿನ ಜನರಿಗೆ ರಾವಣನು ರಾಜನಾಗಿದ್ದನು. ರಾವಣನ ಸಾವಿನ ನಂತರ, ರಾವಣನ ತಮ್ಮ ವಿಭೀಷಣನು ಲಂಕೆಯ ರಾಜನಾದನು; ನೆರೆ=ಸೇರು;

ಕುಬೇರ=ಒಬ್ಬ ದೇವತೆ. ಈತ ಸಂಪತ್ತಿಗೆ ಒಡೆಯನೆಂಬ ಕಲ್ಪನೆಯು ಜನಮನದಲ್ಲಿದೆ. ಸಾವಿರಾರು ವರುಶಗಳ ಹಿಂದೆ ಇಂಡಿಯಾ ದೇಶದ ಕಾಡುಮೇಡುಗಳಲ್ಲಿ ಮತ್ತು ದೊಡ್ಡ ದೊಡ್ಡ ಪರ್ವತ ಪ್ರಾಂತ್ಯಗಳಲ್ಲಿ ಹತ್ತಾರು ಬಗೆಯ ಬುಡಕಟ್ಟುಗಳಿಗೆ ಸೇರಿದ ಜನರು ಬಾಳುತ್ತಿದ್ದರು. ಅವರನ್ನು ದೇವತೆಗಳು, ಕಿನ್ನರರು, ಯಕ್ಷರು, ರಾಕ್ಷಸರು, ಭುಜಂಗರು, ವಾನರರು, ಗುಹ್ಯಕರು, ವಿದ್ಯಾಧರರು ಎಂಬ ಹೆಸರುಗಳಿಂದ ಕರೆಯುತ್ತಿದ್ದರು;

ವರ=ಕೊಡುಗೆ; ಕುಬೇರನ ವರ ರಥ=ಕುಬೇರನು ರಾವಣನಿಗೆ ಕೊಡುಗೆಯಾಗಿ ನೀಡಿದ್ದ ರಥ;

ಮೇಳೈಸು=ಸೇರು/ಒಟ್ಟುಗೂಡು; ದೇವರು=ರಾಮ; ಸಿರಿ+ಪದ+ಅಂಬುಜಕೆ; ಸಿರಿ=ಚೆಲುವು; ಪದ=ಪಾದ; ಅಂಬುಜ=ತಾವರೆ; ಪದಾಂಬುಜ=ತಾವರೆಯಂತಹ ಪಾದ. ಗುರುಹಿರಿಯರ ಮತ್ತು ದೇವತೆಗಳಿಗೆ ಒಲವು ಮತ್ತು ವಿನಯವನ್ನು ತೋರಿಸುವಾಗ ಇಂತಹ ರೂಪಕವನ್ನು ಬಳಸುತ್ತಾರೆ; ಅರ್ಪಿಸು=ಕೊಡುವುದು/ ನೀಡುವುದು; ಲಕ್ಷಣದೇವ=ರಾಮನ ತಮ್ಮ ;

ನಿಜ=ತನ್ನ; ತರುಣಿ=ಯುವತಿ; ನಿಜತರುಣಿ=ತನ್ನ ಹೆಂಡತಿಯಾದ ಸೀತೆ; ವರೂಥ=ರಥ; ತರಣಿ=ಸೂರ್ಯ; ಸುತ=ಮಗ; ತರಣಿಸುತ=ಸೂರ್ಯನ ಮಗನಾದ ಸುಗ್ರೀವ. ವಾನರ ಬುಡಕಟ್ಟಿನ ರಾಜ; ಹನುಮಂತ=ರಾಮನ ಭಂಟ. ವಾನರ ಬುಡಕಟ್ಟಿಗೆ ಸೇರಿದ ವ್ಯಕ್ತಿ ; ಜಾಂಬವ=ಕಿಷ್ಕಿಂಧೆಯ ರಾಜನಾದ ಸುಗ್ರೀವನ ಸಚಿವರಲ್ಲಿ ಒಬ್ಬ; ಒಗ್ಗು=ಹಿಗ್ಗು/ಆನಂದ; ಅಯ್ದು=ಬರು; ಒಗ್ಗಿನಲಿ ಐದಿತು=ಹಿಗ್ಗಿನಿಂದ ಬಂದರು;

ಸುಗ್ರೀವ=ದಂಡಕಾರಣ್ಯದ ನಡುವೆ ಇದ್ದ ಕಿಷ್ಕಿಂಧೆಯೆಂಬ ಪ್ರಾಂತ್ಯದಲ್ಲಿ ನೆಲೆಸಿದ್ದ ವಾನರರ ಬುಡಕಟ್ಟಿನ ರಾಜ; ನಳ, ನೀಲ, ಶತಬಲಿ, ಸುಷೇಣ, ಪ್ಲವಂಗ, ಗವಯ, ಗವಾಕ್ಷ–ಇವರೆಲ್ಲರೂ ಸುಗ್ರೀವನ ವಾನರಪಡೆಯಲ್ಲಿ ಸೇನಾಧಿಪತಿಗಳಾಗಿದ್ದರು; ಅಂಗದ=ಸುಗ್ರೀವನ ಅಣ್ಣನಾದ ವಾಲಿಯ ಮಗ ತುಂಗ=ಎತ್ತರವಾದ; ವಿಕ್ರಮ=ಪರಾಕ್ರಮ; ಅಖಿಳ=ಎಲ್ಲರನ್ನು ಒಳಗೊಂಡ; ವಾನರ=ಕೋತಿ/ಮಂಗ. ಕಾಡಿನಲ್ಲಿ ವಾಸಮಾಡುತ್ತಿದ್ದ ಒಂದು ಬುಡಕಟ್ಟಿನ ಜನರನ್ನು 'ವಾನರರು' ಎಂದು ಕರೆಯುತ್ತಿದ್ದರು. ಏಕೆಂದರೆ ಅವರು ಪ್ರಾಣಿಯಾದ ಕೋತಿಯನ್ನು ತಮ್ಮ ಬುಡಕಟ್ಟಿನ ದೇವರನ್ನಾಗಿ ಪೂಜಿಸುತ್ತಿದ್ದರು;

ಸಮರಂಗ=ಕಾಳೆಗದ ಕಣ; ಸಂಗಡಿಸು=ಒಟ್ಟಾಗು/ಗುಂಪು ಸೇರುವುದು ; ಮೋಹ=ಅಕ್ಕರೆ/ಪ್ರೀತಿ ; ರಘು=ರಾಮನ ತಂದೆಯಾದ ದಶರಥನ ತಾತ. ಈತನ ಹೆಸರಿನಲ್ಲಿಯೇ ರಾಮನ ರಾಜಮನೆತನದ ವಂಶಕ್ಕೆ 'ರಘುವಂಶ' ಎಂಬ ಹೆಸರು ಬಂದಿತ್ತು ; ಪುಂಗವ=ಒಡೆಯ/ನಾಯಕ; ರಘುಪುಂಗವ=ರಘುಕುಲದ ಒಡೆಯ ; ಸಂದಣಿಸು=ಸಡಗರ/ಸದ್ದು/ಗದ್ದಲ;

ಲಂಕೆ=ರಾವಣನ ಆಳ್ವಿಕೆಯ ರಾಜ್ಯದ ರಾಜಧಾನಿ ; ಪೌರಜನ=ಪಟ್ಟಣಿಗರು; ಭೂರಿ=ಹೆಚ್ಚು/ದೊಡ್ಡದು; ಬಲ=ದಳ/ಪಡೆ; ಭೂರಿಬಲ=ದೊಡ್ಡ ಪಡೆ; ಐತರುತಲ್+ಇರೆ; ಐತರು=ಆಗಮಿಸು/ಸಮೀಪಿಸು ; ಇರೆ=ಇರಲು ;

ರಣ=ಕಾಳಗ; ಭೇರಿ=ನಗಾರಿ/ದೊಡ್ಡ ಆಕಾರದಲ್ಲಿರುವ ಒಂದು ಬಗೆಯ ಚರ್ಮ ವಾದ್ಯ; ದಂಧಣಧಣರ್+ಎನಲು; ದಂಧಣಧಣ=ನಗಾರಿಯನ್ನು ಬಾರಿಸುವಾಗ ಉಂಟಾಗುವ ದನಿ; ಮಿಗು=ಹೆಚ್ಚಾಗು; ಚೀರು=ಕೂಗು/ಅರಚು/ ಅಬ್ಬರದ ದನಿಯು ಹೊರಹೊಮ್ಮುವುದು; ಕಹಳೆ=ಲೋಹದ ಒಂದು ವಾದ್ಯ;

ದಿಕ್ಪಾಲಕರು=ದಿಕ್ಕುಗಳನ್ನು ಕಾಪಾಡುವವರು; ಮೂಡಣ ಪಡುವಣ ತೆಂಕಣ ಬಡಗಣ ಎಂಬ ನಾಲ್ಕು ದಿಕ್ಕುಗಳನ್ನು ಮತ್ತು ಈಶಾನ್ಯ, ಆಗ್ನೇಯ, ವಾಯವ್ಯ,

ನೈರುತ್ಯ ಎಂಬ ನಾಲ್ಕು ಮೂಲೆ ದಿಕ್ಕುಗಳನ್ನು ಎಂಟು ಮಂದಿ ದೇವತೆಗಳು ಕಾಯುತ್ತಿರುತ್ತಾರೆ ಎಂಬ ನಂಬಿಕೆಯು ಜನಮನದಲ್ಲಿದೆ ;

ತಡೆಯುದೆ=ವಿಳಂಬ ಮಾಡದೆ; ಐತಂದು=ಆಗಮಿಸಿ/ಬಂದು; ಉಭಯಬಲ=ಎರಡು ಕಡೆಯ ಸೇನೆ; ಸಂಗಡಿಸು=ಗುಂಪುಗೂಡು;

ಸೇತು=ಸೇತುವೆ; ನೆರೆ=ಪೂರ್ತಿಯಾಗಿ/ಪೂರ್ಣವಾಗಿ; ದಾಂಟು=ದಾಟು/ಹಾಯ್ದುಹೋಗು; ನೃಪತಿ=ರಾಜ;

ರಾಮೇಶ್ವರ=ತಮಿಳು ನಾಡಿನ ಕಡಲತೀರದಲ್ಲಿರುವ ಒಂದು ಪಟ್ಟಣ. ಈ ಪಟ್ಟಣದ ಬಗ್ಗೆ ವಾಲ್ಮೀಕಿ ರಾಮಾಯಣದ ಪ್ರಸಂಗವೊಂದು ಜನಮನದಲ್ಲಿ ನೆಲೆಸಿದೆ. ರಾವಣನ ಸೆರೆಯಲ್ಲಿದ್ದ ಸೀತೆಯನ್ನು ಬಿಡಿಸಿಕೊಂಡು ಬರಲು ರಾಮನು ಲಂಕೆಗೆ ವಾನರಸೇನೆಯೊಡನೆ ಹೊರಡುವಾಗ, ಹಿಂದೂ ಮಹಾಸಾಗರವನ್ನು ದಾಟಲೆಂದು ಸೇತುವೆಯನ್ನು ಕಟ್ಟಲು ಈ ಕಡಲ ತೀರದಲ್ಲಿ ತನ್ನ ಬಿಲ್ಲಿನ ತುದಿಯಿಂದ ಜಾಗವನ್ನು ಗುರುತುಹಾಕಿದನು ಎಂಬ ದಂತಕತೆಯಿದೆ. ಈ ಪಟ್ಟಣಕ್ಕೆ ಸೇತುರಾಮೇಶ್ವರ ಎಂಬ ಮತ್ತೊಂದು ಹೆಸರಿದೆ;

ಮೃಡ=ಶಿವ; ವಾಲ್ಮೀಕಿ+ಆಶ್ರಮಕೆ; ವಾಲ್ಮೀಕಿ=ಒಬ್ಬ ರಿಸಿ. ರಾಮಾಯಣ ಮಹಾಕಾವ್ಯವನ್ನು ಬರೆದವರು; ಆಶ್ರಮ=ಕಾಡಿನಲ್ಲಿ ಮುನಿಗಳು ನೆಲೆಸಿರುವ ಜಾಗ; ಐದಿದನು=ಬಂದನು;

ಜಾನಕಿ=ಜನಕ ಮಹಾರಾಜನ ಮಗಳು ಜಾನಕಿ/ಸೀತೆ ; ವಲ್ಲಭ=ಗಂಡ ; ಜಾನಕಿವಲ್ಲಭ=ಸೀತೆಯ ಗಂಡನಾದ ರಾಮ ;

ಸಡಿಲದ+ಉನ್ನತ; ಸಡಿಲ=ಬಿಗಿಯಿಲ್ಲದಿರುವುದು ; ಉನ್ನತ=ಉತ್ತಮ ; ಸಡಿಲದುನ್ನತ ಬಲ=ಯಾವುದೇ ಕುಂದುಕೊರತೆಯಿಲ್ಲದ ಶಕ್ತಿಯುತವಾದ ಸೇನೆ; ಮುಚುಕುಂದನ+ಆಶ್ರಮಕೆ; ಮುಚುಕುಂದ=ಒಬ್ಬ ಮುನಿ ;

ಪಂಚನಂದಿ+ಒಳ್; ಪಂಚನಂದಿ=ಆಶ್ರಮ ಪ್ರಾಂತ್ಯದ ಹೆಸರು; ಪಲ್ಲೈಸು=ಹರಡಿಕೊಳ್ಳು/ಹಬ್ಬಿಕೊಳ್ಳು; ಫಲ=ಹಣ್ಣು/ಬಹುಬಗೆಯ ಬೆಳೆಗಳು; ಸಂಭ್ರಮ=ಸಡಗರ/ಉತ್ಸಾಹ ; ಕಡಲು=ಸಮುದ್ರ; ಕಡಲು=ಪಂಚನಂದಿಯಲ್ಲಿ ವಿಸ್ತಾರವಾಗಿ ಹಬ್ಬಿರುವ ಹಚ್ಚಹಸಿರಿನ ಮರಗಿಡಗಳನ್ನು, ಹೂಹಣ್ಣುಕಾಯಿಗಳ ಸೊಬಗನ್ನು ಸೂಚಿಸುವ ರೂಪಕವಾಗಿ 'ಕಡಲು' ಎಂಬ ಪದವನ್ನು ಬಳಸಲಾಗಿದೆ/ಹಚ್ಚಹಸಿರಿನ ಕಡಲು;

ಮಹಾ+ವನದ+ಒಳಗೆ; ವನ=ಕಾಡು; ಮಹಾವನ=ದೊಡ್ಡ ಕಾಡು; ಸುಭಟ+ಸ್ತೋಮವು; ಸುಭಟ=ಒಳ್ಳೆಯ ಸೈನಿಕ; ಸ್ತೋಮ=ಗುಂಪು; ಇಳಿದುದು=ಬಿಡಾರ ಹೂಡಿತು/ತಂಗಿತು;

ಪಾಳೆಯ=ಪಡೆ/ದಂಡು; ಸಂಗ್ರಾಮ=ಕಾಳಗ; ಇದಿರು=ಎದುರುಗಡೆ; ಗುಡಿ=ಬಾವುಟ; ಗುಡಾರ=ಸೇನೆಯುವರು ತಾತ್ಕಾಲಿಕವಾಗಿ ಬಿಡಾರ ಹೂಡುವುದಕ್ಕಾಗಿ ಬಟ್ಟೆಯಿಂದ ಕಟ್ಟಿರುವ ಡೇರೆ; ವಿರಾಜಿಸು=ಕಾಂತಿಯಿಂದ ಕಂಗೊಳಿಸು;

ರಾಮಣೀಯಕ=ಸುಂದರವಾದುದು/ಚೆಲುವಾದುದು; ರಚನೆ=ಕ್ರಮ/ರೀತಿ/ನಿರ್ಮಾಣ; ಸುತ್ರಾಮ=ದೇವೇಂದ್ರ; ಓಲಗದ+ಅಂತೆ; ಓಲಗ=ರಾಜನ ಸಭೆ;

ಕೌಶಿಕ, ಜಮದಗ್ನಿ, ಜನ್ಹು, ಪರಾಶರ, ಜಾಬಾಲಿ, ಭೃಗು, ಗೌತಮ–ಇವರೆಲ್ಲರೂ ಕಾಡಿನಲ್ಲಿ ಆಶ್ರಮವಾಸಿಗಳಾಗಿದ್ದ ರಿಸಿಗಳು.

ಗೌತಮನ್+ಆದಿ+ಆದ; ಆದಿ=ಮೊದಲಾದ; ಸಮಸ್ತ=ಎಲ್ಲ; ಭಾಸುರ=ಅಂದ/ಸೊಗಸು/ಹೊಳೆಯುವ/ಪ್ರಕಾಶಿಸುವ; ತೇಜ=ಹೊಳಪು/ಕಾಂತಿ; ನಿವೇಶನ=ಮನೆ/ನಿವಾಸ; ಹೊರವಂಟು=ಹೊರಬಂದು;

ದಾಶರಥಿ=ದಶರಥನ ಮಗ ರಾಮ; ಅಕ್ಷತೆ=ಅರಿಸಿನ ಸವರಿದ ಅಕ್ಕಿಯ ಕಾಳುಗಳು; ತಳಿ=ಎರಚು/ಸಿಂಪಡಿಸು;

ತನಯ=ಮಗ; ದಶರಥ ತನಯ=ದಶರಥನ ಮಗ ರಾಮ ; ಸೋಮ=ಚಂದ್ರ; ರಘುಕುಲ ಸೋಮ=ರಘುವಂಶದ ಚಂದ್ರ ;

ನೃತ=ಸತ್ಯ/ದಿಟ; ಸನ್ನೃತ=ಹೆಚ್ಚಿನ ಸತ್ಯ; ಸನಾಮ=ಒಳ್ಳೆಯ ಹೆಸರು;

ಸನ್ನೃತ ಸನಾಮ=ಮಹಾಸತ್ಯವಂತನೆಂಬ ಹೆಸರಾಂತವನು;

ಆಹವ=ಕಾಳಗ; ಭೀಮ=ಭಯಂಕರನಾದವನು; **ಆಹವ ಭೀಮ**=ಕಾಳೆಗದಲ್ಲಿ ಮಹಾ ವೀರನಾದವನು;

ಸುಜನ=ಒಳ್ಳೆಯ ಜನ; **ಸುಜನ ಪ್ರೇಮ**=ಒಳ್ಳೆಯ ಜನರಲ್ಲಿ ಪ್ರೇಮ ಉಳ್ಳವನು;

ಅಭಿರಾಮ=ಸುಂದರವಾದ; **ಜಗದಭಿರಾಮ**=ಜಗತ್ತಿನಲ್ಲಿಯೇ ಸುಂದರನಾದವನು;

ನಿಸ್ಸೀಮ=ಅತಿ ಶೂರ;

ತಾಮರಸ=ತಾವರೆಯ ಹೂ;ದಳ=ಎಸಳು; ನಯನ=ಕಣ್ಣು; **ತಾಮರಸದಳ ನಯನ**=ತಾವರೆಯ ದಳದಂತೆ ಕಣ್ಣುಳ್ಳವನು;

ದೇವ ಪ್ರೇಮ=ದೇವತೆಗಳ ಪ್ರೇಮಕ್ಕೆ ಪಾತ್ರನಾದವನು;

ಸುರ=ದೇವತೆ; ಕುಲ=ಗುಂಪು; ಮೌಳಿ=ಕಿರೀಟ; ವಂದಿತ=ನಮಸ್ಕರಿಸಲ್ಪಟ್ಟವನು; **ಸುರಕುಲ ಮೌಳಿ ವಂದಿತ**=ಕಿರೀಟಧಾರಿಗಳಾದ ದೇವತೆಗಳಿಂದ ನಮಸ್ಕರಿಸಲ್ಪಟ್ಟವನು;

ಪಾಲಿಸು=ಕಾಪಾಡು; ಪೊಗಳು=ಹೊಗಳು/ಗುಣಗಾನ ಮಾಡು;

ಕಷ್ಟವ ಬಳಸಿ=ಸಂಕಟಕ್ಕೆ ಗುರಿಯಾಗಿ; ಕಾವ=ಕಾಪಾಡುವ; ಹದನ=ರೀತಿ; ಪಾಲಿಸು=ಕಾಪಾಡು; ಸಾರ=ಉತ್ತಮವಾದ; ಹೃದಯ=ಮನಸ್ಸು; ಸಾರಹೃದಯರು=ಒಳ್ಳೆಯ ಮನಸ್ಸಿನವರು; ಉಪಚಾರವು+ಏಕೆ+ಇದು; ಉಪಚಾರ=ಒಲವು ನಲಿವು ಮತ್ತು ಆದರದಿಂದ ಸೇವೆಯನ್ನು ಮಾಡುವುದು

ನಿಮ್ಮ+ಅಡಿಯ; ಅಡಿ=ಪಾದ; ಕರುಣಾ=ದಯೆ; ರಸ=ರುಚಿ/ಸವಿ; ಕರುಣಾರಸ=ಒಲವು ನಲಿವು ಕರುಣೆಯಿಂದ ಕೂಡಿದ ನಡೆನುಡಿ; ಸಲಹು=ಕಾಪಾಡು; ಆರಿಗೆ=ಯಾರಿಗೆ; ಎಮಗೆ=ನಮಗೆ;

ಕಪಿ+ಕುಲ+ಇಂದ್ರ; ಕಪಿ=ಕೋತಿ; ಕುಲ=ವಂಶ/ಗುಂಪು; ಇಂದ್ರ=ಒಡೆಯ; ಕಪಿಕುಲೇಂದ್ರ=ಕಪಿಗಳ ಗುಂಪಿನ ಒಡೆಯ; ಗಡಣ=ಸಮೂಹ; ರಾವಣ+ಅನುಜ; ಅನುಜ=ತಮ್ಮ; ರಾವಣಾನುಜ=ವಿಭೀಷಣ; ನಿಕರ=ಸಮೂಹ; ಚಾಮರ=ಬೀಸಣಿಗೆ/ ಚಮರೀ ಎಂಬ ಪ್ರಾಣಿಯ ಕೂದಲಿನಿಂದ ಮಾಡಿದ ಬೀಸಣಿಗೆ; ಬಿಡದೆ=ಒಂದೇ ಸಮನೆ/ನಿರಂತರವಾಗಿ; ಚಿಮ್ಮಲು=ಬೀಸುತ್ತಿರಲು; ಪೊಡವಿ+ಪತಿ; ಪೊಡವಿ=ಭೂಮಿ; ಪತಿ=ಒಡೆಯ; ಪೊಡವಿಪತಿ=ರಾಜ; ರಂಜಿಸು=ಹಿಗ್ಗುವಂತೆ ಮಾಡು/ಆನಂದ ಪಡಿಸು;

ನೆರೆ=ಸೇರು; ಮಹಾಮುನೀಶ್ವರರು=ದೊಡ್ಡದೊಡ್ಡ ಮುನಿಗಳು; ರಾಮನ+ಓಲಗಕೆ; ಓಲಗ=ರಾಜ ಸಭೆ; ಅಖಿಳ=ಎಲ್ಲಾ; ವಸ್ತು=ಪದಾರ್ಥ;

ರಸಾಯನ=ಬಾಳೆಹಣ್ಣು ಮತ್ತು ಬೆಲ್ಲವನ್ನು ಸೇರಿಸಿ ಮಾಡುವ ಒಂದು ಬಗೆಯ ಸಿಹಿಯಾದ ತಿನಿಸು; ಭುಲ್ಲವಿಸು=ಉತ್ಸಾಹಗೊಳ್ಳು; ರಚಿಸು=ಅಣಿಮಾಡು/ ತಯಾರಿಸು; ಸುಭಕ್ಷ+ಗಳ್+ಎಲ್ಲವನು; ಭಕ್ಷ=ಆಹಾರ/ಉಣಿಸು ತಿನಸು;

ಸುಭಕ್ಷ=ರುಚಿಕರವಾದ ಆಹಾರ; ಹೆಡಗೆ=ಬಿದಿರಿನ ಕಡ್ಡಿಗಳನ್ನು ಹೆಣೆದು ಮಾಡಿರುವ ಬುಟ್ಟಿ/ಪುಟ್ಟಿ/ಮಂಕರಿ;

ಮುದ=ಆನಂದ/ಹಿಗ್ಗು; ರಘುಕುಲ=ರಘುವಂಶ; ಸಾರ್ವಭೌಮ=ಚಕ್ರವರ್ತಿ; ನಿಜ=ತನ್ನ; ನಿಜಬಲಕೆ=ರಾಮನು ತನ್ನ ಸೇನೆಗೆ ಅಂದರೆ ವಾನರರ ಪಡೆಗೆ;

ಭೋಜ್ಯ=ರುಚಿಕರವಾದ ಉಣಿಸುತಿನಸು; ಮುನಿವರರ=ಉತ್ತಮರಾದ ಮುನಿಗಳನ್ನು;

ನಂದನ=ಮಗ; ರಘುನಂದನ=ರಾಮ; ಅನಿಲ=ವಾಯು; ಸುತ=ಮಗ; ಅನಿಲಸುತ=ವಾಯುದೇವನ ಮಗ ಹನುಮಂತ; ಇವರ=ಈ ತಿಂಡಿತಿನಸುಗಳ; ಕರ=ಕಯ್; ಬಿನ್ನೈಸು=ಅರಿಕೆ ಮಾಡಿಕೊಳ್ಳುವುದು/ವಿನಂತಿಸಿಕೊಳ್ಳುವುದು;

ರಘುಪತಿ=ರಘುವಂಶದ ರಾಜ ರಾಮ; ಚಿತ್ತೈಸು=ಕೇಳುವಂತಹವನಾಗು; ಇನ=ಸೂರ್ಯ; ಕುಲ=ವಂಶ;

ಅನ್ವಯ=ನಂಟು/ಹೊಂದಿಕೆ; ತಿಲಕ=ಉತ್ತಮನಾದ ವ್ಯಕ್ತಿ; ಇನಕುಲಾನ್ವಯತಿಲಕ=ಸೂರ್ಯವಂಶದ ರಾಜರ ಸಾಲಿನಲ್ಲಿ ಅತ್ಯುತ್ತಮನಾದವನು; ಧಾನ್ಯ=ಆಹಾರವಾಗಿ ಉಣ್ಣುವ ತಿನ್ನುವ ದಿನಸಿ; ತನು=ದೇಹ/ಶರೀರ; ಧಾನ್ಯದ ತನು=ಕಾಳುಗಳ ಆಕಾರ ಮತ್ತು ಕಸುವು; ಈಕ್ಷಿಸು=ನೋಡು/ಪರಿಶೀಲಿಸು; ನೃಪಾಲ=ರಾಜ; ಸಲೆ=ಸರಿಯಾಗಿ/ಪೂರ್ಣವಾಗಿ/ನಿಜವಾಗಿ; ಹದನು=ರೀತಿ;

ಮನನಲಿದು=ಮನಸ್ಸಿನಲ್ಲಿ ಆನಂದಿಸಿ; ವಿನಯ=ನಮ್ರತೆ; ತಾರ=ತೆಗೆದುಕೊಂಡು ಬನ್ನಿ; ತಳುವು=ತಡ/ವಿಳಂಬ; ಮೆರೆ=ಕಂಗೊಳಿಸು; ನರೆದಲೆಗ=ರಾಗಿ; ನೆಲ್ಲು=ಬತ್ತ; ಹಾರಕ=ಒಂದು ಬಗೆಯ ದವಸ; ಬರಗು=ಒಂದು ಬಗೆಯ ದವಸ; ಜೋಳ=ಒಂದು ಬಗೆಯ ದವಸ; ಕಂಬು=ಒಂದು ಬಗೆಯ ದವಸ; ಸಾಮೆ=ಒಂದು ಬಗೆಯ ದವಸ; ಉರು=ಉತ್ತಮವಾದ/ಚೆನ್ನಾಗಿರುವ; ತರ=ಬಗೆ/ರೀತಿ; ನವಣೆ=ಒಂದು ಬಗೆಯ ದವಸ; ನವ=ಒಂಬತ್ತು; ಧಾನ್ಯ=ಆಹಾರಕ್ಕಾಗಿ ಬಳಸುವ ದವಸ/ಕಾಳು;

ನವಧಾನ್ಯ=ಗೋದಿ, ಬತ್ತ, ಉದ್ದು, ಹೆಸರು, ಕಡಲೆ, ತೊಗರಿ, ಹುರುಳಿ, ಅವರೆ, ಎಳ್ಳು ಎಂಬ ಒಂಬತ್ತು ಬಗೆಯ ದವಸಗಳು;

ಅರಸು=ಹುಡುಕು; ಪರಮ=ಬಹಳ ಚೆನ್ನಾಗಿರುವ; ಸಾರ=ಸತ್ವಯುತವಾದ ತಿರುಳು; ಪರಮಸಾರ=ಬಹಳ ಸತ್ವವುಳ್ಳ; ಹೃದಯ=ಎದೆ/ತಿರುಳು; ಆರು=ಯಾರು;

ಅತಿಶಯ=ಬಹಳವಾಗಿ/ದೊಡ್ಡದಾಗಿ; ಪತಿಕರಿಸು=ಹೊಗಳು/ಮೆಚ್ಚು/ಕೊಂಡಾಡು; ಮತ+ಏಕೆ; ಮತ=ಅಭಿಪ್ರಾಯ/ಅನಿಸಿಕೆ; ಏಕೆ=ಏತಕ್ಕೆ; ಪೇಳಿ=ಹೇಳಿ; ದಾಶರಥಿ=ರಾಮ; ಚಿತ್ತೈಸು=ಕೇಳುವಂತಹವನಾಗು; ದೇಶಕೆ+ಅತಿಶಯ; ವಾಸಿ+ಉಳ್ಳವನ್+ಈತ; ವಾಸಿ=ಮೇಲು/ಉತ್ತಮ/ಹೆಚ್ಚಿನ ಗುಣಮಟ್ಟ/ಸತ್ವ;

ಉಳ್ಳವನ್=ಹೊಂದಿರುವವನು/ಪಡೆದವನು; ಈತ=ಇವನು; ಮಿಕ್ಕು=ಉಳಿದ/ಇತರ; ಧಾನ್ಯ+ಏಕೆ+ಎನಲು; ಲೇಸನು+ಆಡಿದ; ಲೇಸು=ಒಳ್ಳೆಯದು/ಹಿತವಾದುದು; ಮುನಿಪ=ರಿಸಿ; ದೋಷ=ತಪ್ಪು/ಕುಂದು/ಕೆಟ್ಟಗುಣ; ರಹಿತ=ಇಲ್ಲದ; ದೋಷರಹಿತನು=ಕೆಟ್ಟ ನಡೆನುಡಿಗಳಿಲ್ಲದವನು; ಈಸು=ಇಷ್ಟರಮಟ್ಟಿಗೆ/ಈ ಪ್ರಮಾಣದಲ್ಲಿ;

ಪರಿ=ರೀತಿ; ಪರಿಯಲಿ=ರೀತಿಯಲ್ಲಿ; ಪಕ್ಷಪಾತ=ತಾರತಮ್ಯ/ಒಬ್ಬರಲ್ಲಿ ಒಲವನ್ನು ತೋರಿಸುತ್ತಾ, ಇತರರನ್ನು ಕಡೆಗಣಿಸುವುದು; ವ್ರಿಹಿಗ=ಬತ್ತ; ಸಾರ=ಸತ್ವ; ಬಲ್ಲಿರಿ=ತಿಳಿದಿರುವಿರಿ; ಅರಿ=ತಿಳಿ/ಗ್ರಹಿಸು; ಅರಿಯಿರೆ=ತಿಳಿದಿಲ್ಲವೇ;

ಉಪೇಕ್ಷೆ+ಉಂಟೇ; ಉಪೇಕ್ಷೆ=ಕಡೆಗಣಿಸುವಿಕೆ; ನೆಲ್ಲು=ಬತ್ತ ; ನಾನು+ಇರೆ; ಮೊದಲಾದ+ಎಲ್ಲ; ಧಾನ್ಯಗಳು+ಇರಲು; ಬಲ್ಲಿದ=ಕಸುವುಳ್ಳವನು ; ಇದು+ಆವ; ಆವ=ಯಾವ; ಮತ=ಅಭಿಪ್ರಾಯ; ಏನ್+ಎಲವೊ; ಎನಗೆ+ಇಲ್ಲಿ;

ಸಮಾನ=ಸಾಟಿ/ಎಣೆ; ಹೆಚ್ಚು=ಅತಿಶಯ; ಕುಂದು=ತಪ್ಪು/ಕೊರತೆ; ಹೆಚ್ಚುಕುಂದುಗಳು=ಒಳ್ಳೆಯದು ಮತ್ತು ಕೆಟ್ಟದ್ದು; ದಾನವ+ಅಂತಕ; ಅಂತಕ=ಯಮ; ದಾನವಾಂತಕ=ರಕ್ಕಸರನ್ನು ಕೊಂದವನು/ರಾಮ ; ಬಲ್ಲನ್=ತಿಳಿದಿದ್ದಾನೆ;

ಜಾನಕಿಪತಿ=ಜಾನಕಿಯುಗಂಡ/ರಾಮ; ಸನಿಹ=ಹತ್ತಿರ/ಸಮೀಪ; ಕುಲಹೀನ=ಕೀಳುಕುಲದವನು; ಪ್ರತಿಷ್ಠ=ಅಹಂಕಾರಿ/ಗರ್ವಿ; ಸುಡು=ಬೆಂಕಿ ಹಾಕು; ಮತಿ=ಬುದ್ಧಿ/ತಿಳುವಳಿಕೆ; ಮತಿಹೀನ=ತಿಳುವಳಿಕೆಯಿಲ್ಲದವನು;

ಖತಿ=ಕೋಪ/ಸಿಟ್ಟು; ಬೈದು=ತೆಗಳಿ/ನಿಂದಿಸಿ; ಭಂಗಿಸು=ಅಪಮಾನಪಡಿಸು; ಲೋಕ=ಪ್ರಪಂಚ; ಅಧಿಕ=ಹೆಚ್ಚು/ಅತಿಶಯ; ಭೋಜನ=ಊಟ/ಆಹಾರ; ಇದು+ಎಂದು; ಆಕೆವಾಳ=ವೀರ/ಪರಾಕ್ರಮಿ; ಬುಧ=ಪಂಡಿತ;

ಜರೆ=ನಿಂದಿಸು; ನಿರಾಕರಿಸು=ಒಪ್ಪಿಕೊಳ್ಳದೆ; ಬಿಡು=ತೊರೆಯಲು; ಅಂತು=ಹಾಗೆ; ನೀ=ನೀನು; ಶೂದ್ರ+ಅನ್ನ+ಆದೆಯಲ;

ಶೂದ್ರ=ಇಂಡಿಯಾ ದೇಶದ ಪ್ರಾಚೀನ ಕಾಲದ ಸಾಮಾಜಿಕ ರಚನೆಯಲ್ಲಿ 'ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ' ಎಂಬ ನಾಲ್ಕು ವರ್ಣಗಳಿದ್ದವು. ಮೇಲು ಕೀಳಿನ ಮೆಟ್ಟಲುಗಳಿಂದ ಕೂಡಿದ್ದ ಈ ನಾಲ್ಕು ವರ್ಣಗಳಲ್ಲಿ ಶೂದ್ರನು ಅತ್ಯಂತ ಕೆಳಹಂತದಲ್ಲಿದ್ದನು. ಶೂದ್ರನಿಗೆ ವಿದ್ಯೆಯನ್ನು ಕಲಿಯಲು, ಸಂಪತ್ತನ್ನು ಪಡೆಯಲು ಮತ್ತು ಆಡಳಿತದ ಗದ್ದುಗೆಯನ್ನು ಏರಲು ಅವಕಾಶವಿರಲಿಲ್ಲ. ಆದ್ದರಿಂದ ಶೂದ್ರರಲ್ಲಿ ಬಹುತೇಕ ಮಂದಿ ಹಸಿವು ಮತ್ತು ಬಡತನದಿಂದ ನರಳುತ್ತಿದ್ದರು;

ಅನ್ನ=ಆಹಾರ/ಉಣಿಸು/ಊಟ; ಅದೆಂಯಲ=ಅದೆಂಯುಲ್ಲವೇ; ಶೂದ್ರಾನ್ನ=ಶೂದ್ರರು ಉಣ್ಣುವ ಆಹಾರ;

ಲೋಕದಲಿ ಅಧಿಕ ಭೋಜನವು ಇದೆಂದು ಆಕೆವಾಳರು ಬುಧರು ಜರೆದು ನಿರಾಕರಿಸಿ ಬಿಡಲು, ಅಂತು ನೀ ಶೂದ್ರಾನ್ನವಾದೆ=ಜಗತ್ತಿನಲ್ಲಿ ದುಡಿಯುವ ವರ್ಗದ ಬಡಜನರಾದ ಶೂದ್ರರು ಆಹಾರವಾಗಿ ನಿನ್ನನ್ನೇ ಹೆಚ್ಚಾಗಿ ಬಳಸುತ್ತಿದ್ದುದನ್ನು ನೋಡಿದ ಪಂಡಿತೋತ್ತಮರು ನಿನ್ನನ್ನು ಕಡೆಗಣಿಸಿದ ಕಾರಣದಿಂದ ನೀನು ಶೂದ್ರಾನ್ನವಾಗಿಯೇ ಉಳಿದಿದ್ದೀಯೆ; ಏಕೆಂದರೆ ಬಡವರು ಉಣ್ಣುವ ಆಹಾರ, ಬಡವರ ಉಡುಗೆ ತೊಡುಗೆ, ಬಡವರು ಆಡುವ ಮಾತಿನ ಉಚ್ಚಾರಣೆಯ ರೀತಿ ಮತ್ತು ಬಳಸುವ ನುಡಿ ಸಾಮಗ್ರಿಗಳನ್ನು ಸಿರಿವಂತರು, ಪಂಡಿತರು ಮತ್ತು ಮೇಲು ಜಾತಿಯವರು ಕೀಳಾಗಿ ಕಾಣುತ್ತಾರೆ;

ಬಡವರು ರಾಗಿಯನ್ನು ಹೆಚ್ಚಾಗಿ ಬಳಸುತ್ತಿದ್ದುದಕ್ಕೆ ಕಾರಣವೇನೆಂಬುದನ್ನು ತಿಳಿಯಬೇಕಾದರೆ ಕನಕದಾಸರ ಕಾಲದಲ್ಲಿ ಅಂದರೆ ಹದಿನಾರನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಬೆಳೆಯುತ್ತಿದ್ದ ಬೆಳೆಗಳಲ್ಲಿ ರಾಗಿ ಮತ್ತು ಬತ್ತದ ಬೆಳೆಗಳ ಪ್ರಮಾಣವನ್ನು ಅರಿಯಬೇಕು. ಅಂದಿನ ಕಾಲದಲ್ಲಿ ರಾಗಿಯನ್ನು ಹೆಚ್ಚಾಗಿ ಬೆಳೆಯಲಾಗುತ್ತಿತ್ತು. ಏಕೆಂದರೆ ರಾಗಿಯು ಮಳೆಯನ್ನು ಅವಲಂಬಿಸಿರುವ ಬೆಳೆ. ಬತ್ತವನ್ನು ಬೆಳೆಯಬೇಕಾದರೆ ನೀರಿನ ಅನುಕೂಲ ಚೆನ್ನಾಗಿರಬೇಕು. ಆಗಿನ ಕಾಲದಲ್ಲಿ ದೊಡ್ಡ ದೊಡ್ಡ ಅಣೆಕಟ್ಟುಗಳು ಇರಲಿಲ್ಲವಾದ್ದರಿಂದ ಬತ್ತದ ಬೆಳೆಯ ಪ್ರಮಾಣವು ರಾಗಿ ಬೆಳೆಯ ಪ್ರಮಾಣಕ್ಕೆ ಹೋಲಿಸಿದರೆ ತುಂಬಾ ಕಡಿಮೆಯಾಗಿತ್ತು. ಮಾರುಕಟ್ಟೆಯಲ್ಲಿ ಬತ್ತದ ಬೆಲೆಯು ರಾಗಿಗಿಂತ ಹೆಚ್ಚಾಗಿತ್ತು.

ಆದ್ದರಿಂದ ಬತ್ತದಿಂದ ದೊರೆಯುವ ಅಕ್ಕಿಯನ್ನು ಕೊಂಡು ತಿನ್ನುವ ಹಣಕಾಸಿನ ಅನುಕೂಲ ಸಿರಿವಂತರಾದ ಮೇಲು ಜಾತಿ ಮತ್ತು

ಮೇಲುವರ್ಗದವರಿಗೆ ಇತ್ತೇ ಹೊರತು ಬಡವರಿಗೆ ಇರಲಿಲ್ಲ. ಇಪ್ಪತ್ತನೆಯ ಶತಮಾನದ ಮಧ್ಯಭಾಗದವರೆಗೂ ನಮ್ಮ ಹಳ್ಳಿಗಳಲ್ಲಿ ಬಡವರು ಹಬ್ಬದ ದಿನಗಳಲ್ಲಿ ವರುಶಕ್ಕೆ ನಾಲ್ಕಾರು ಸಲ ಅನ್ನವನ್ನು ಉಣ್ಣುತ್ತಿದ್ದರೇ ಹೊರತು, ಉಳಿದೆಲ್ಲಾ ದಿನಗಳಂದು ಅವರಿಗೆ ರಾಗಿಯೇ ಆಹಾರವಾಗಿತ್ತು. ರಾಗಿಯು ಬಡವರ ಉಣಿಸಾಗಿದ್ದರೆ, ಅನ್ನವು ಸಿರಿವಂತರ ಉಣಿಸಾಗಿತ್ತು;

ನಾಕ=ಸ್ವರ್ಗ; ನಿಳೆಯ=ಮನೆ; ನಾಕನಿಳೆಯರು=ಸ್ವರ್ಗದಲ್ಲಿ ನೆಲೆಸಿರುವ ದೇವತೆಗಳು; ಸಾಕ್ಷಿ=ಪುರಾವೆ/ರುಜುವಾತು; ವಿವೇಕ=ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎಂಬುದನ್ನು ಒರೆಹಚ್ಚಿ ನೋಡಿ, ಕೆಟ್ಟದನ್ನು ಕಯ್ ಬಿಟ್ಟು ಒಳ್ಳೆಯದನ್ನು ಅವಲಂಬಿಸಿ ನಡೆಯುವ ಎಚ್ಚರದ ಅರಿವು; ಮೆಚ್ಚು=ಹೊಗಳು/ಕೊಂಡಾಡು/ಒಪ್ಪು; ಬಾಹಿರ=ಹೀನ ವ್ಯಕ್ತಿ; ನೀನು+ಆವ; ಆವ=ಯಾವ; ಮಾನ್ಯ=ಮನ್ನಣೆಯನ್ನು ಪಡೆದ ವ್ಯಕ್ತಿ; ಕಡೆ=ಕೊನೆ/ಅಂತ್ಯ; ತೊಲಗು=ಹೊರಟುಹೋಗು/ಬಿಟ್ಟುಹೋಗು; ಕ್ಷಿತಿ=ಭೂಮಿ; ಅಮರ=ದೇವತೆ; ಕ್ಷಿತಿಯ ಅಮರರು=ಬ್ರಾಹ್ಮಣರನ್ನು ಈ ಭೂಮಿಯ ಮೇಲೆ ಇರುವ ದೇವತೆಗಳೆಂದು ಕರೆಯಲಾಗುತ್ತಿತ್ತು;

ಉಪನಯನ=ಮೇಲು ಜಾತಿಯ ಕೆಲವು ಕುಟುಂಬಗಳಲ್ಲಿ ಗಂಡು ಮಕ್ಕಳಿಗೆ ೫/೭/೧೧ ನೆಯ ವಯಸ್ಸಿನಲ್ಲಿ ಮಾಡುವ ಒಂದು ಆಚರಣೆ. ಉಪನಯನದ ನಂತರ ವ್ಯಕ್ತಿಯು ಪ್ರತಿನಿತ್ಯವೂ ತನ್ನ ಜಾತಿಯ ಆಚಾರ ವಿಚಾರಗಳಿಗೆ ಒಳಪಟ್ಟು ಸಂಪ್ರದಾಯದ ಆಚರಣೆಗಳನ್ನು ಕ್ರಮಬದ್ದವಾಗಿ ಮಾಡಬೇಕು;

ವ್ರತ=ದೇವರನ್ನು ಪೂಜಿಸುವಾಗ ಕೆಲವು ಬಗೆಯ ನಿಯಮಗಳನ್ನು ಚಾಚುತಪ್ಪದೆ ಮಾಡುವುದು/ನೋಂಪಿ; ಸುವ್ರತ=ಒಳ್ಳೆಯ ವ್ರತ; ಸುಭೋಜನ=ರುಚಿಕರವಾದ ಊಟ; ಪರಮ=ಅತ್ಯುತ್ತಮ;

ಮಂತ್ರಾಕ್ಷತೆ=ದೇವರ ಪೂಜೆ, ಮದುವೆ ಮತ್ತು ಇತರ ಮಂಗಳಕಾರ್ಯಗಳಲ್ಲಿ ದೇವರ ವಿಗ್ರಹಕ್ಕೆ ಅರ್ಪಿಸಲು, ಮದುಮಕ್ಕಳ ತಲೆ ಮೇಲೆ ಎರಚಲು, ಆಶೀರ್ವಾದ ರೂಪದಲ್ಲಿ ಹರಸುವಾಗ ದೇವರ ಹೆಸರನ್ನು ಹೇಳುತ್ತ ಹಾಕುವ ಅರಿಸಿನ ಬೆರೆತ ಅಕ್ಕಿಯ ಕಾಳುಗಳು;

ಶುಭ=ಒಳ್ಳೆಯದು/ಮಂಗಳಕರವಾದುದು; ಶೋಭನ=ಮದುವೆಯಾದ ಗಂಡು ಹೆಣ್ಣು ಕಾಮದ ನಂಟನ್ನು ಪಡೆಯುವ ಮುನ್ನ ಮಾಡುವ ಆಚರಣೆ; ಆರತಿ=ದೇವರ ವಿಗ್ರಹದ ಮುಂದೆ ದೀಪವನ್ನು ಎತ್ತಿಹಿಡಿದು ಬೆಳಗುವುದು;

ಕ್ರತು+ಗಳ್+ಎಡೆ+ಒಳಗೆ; ಕ್ರತು=ಯಾಗ; ಎಡೆ=ಜಾಗ; ರಂಜಿಸು=ಕಂಗೊಳಿಸು; ನೈವೇದ್ಯ=ದೇವರ ಮುಂದೆ ಇಡುವ ಉಣಿಸು ತಿನಸು; ತಾನ್+ಅಹೆನ್; ತಾನ್=ನಾನು; ಅಹೆನ್=ಆಗಿದ್ದೇನೆ; ಜನಪರಿಗೆ=ರಾಜರಿಗೆ ; ಶಿಶುಗಳಿಗೆ=ಮಕ್ಕಳಿಗೆ;

ಬಾಂಧವ=ನೆಂಟ; ಬ್ರಹ್ಮ=ಜಗತ್ತನ್ನು ರಚನೆಮಾಡಿದ ದೇವರು ಬ್ರಹ್ಮನೆಂಬ ಕಲ್ಪನೆಯು ಜನಮನದಲ್ಲಿದೆ; ಸಮಾರಾಧನೆ=ದೇವರ ಪೂಜೆಯ ಸಮಯದಲ್ಲಿ ಮಾಡುವ ಅನ್ನ ದಾನ; ವಿದ್ಯಾ+ಆರಂಭ; ವಿದ್ಯಾರಂಭ ಕಾಲಕೆ=ಮಗುವಿಗೆ ಅಕ್ಕರವನ್ನು ಮೊದಲು ಕಲಿಸುವಾಗ; ಸಕಲ=ಎಲ್ಲ; ಭೂಸುರ=ಬ್ರಾಹ್ಮಣ; ಹರಿ=ವಿಷ್ಣು;

ಹರಿದಿವಸ=ವಿಷ್ಣುವಿನ ಪೂಜೆಯ ದಿನಗಳಂದು; ಔಪಾಸನೆ=ಪೂಜೆ; ಯೋಗ್ಯನು+ಅಹುದು; ಯೋಗ್ಯ=ಉತ್ತಮನು/ತಕ್ಕವನು; ಅಯೋಗ್ಯ=ಕೆಟ್ಟವನು/ ಯೋಗ್ಯತೆಯಿಲ್ಲದವನು; ಭ್ರಷ್ಟ=ಒಳ್ಳೆಯತನವಿಲ್ಲದನು; ತೊಲಗು=ದೂರ ಸರಿ/ ಇಲ್ಲಿಂದ ಹೊರಡು; ಪುಣ್ಯ+ಅರ್ಚನೆಗೆ;

ಪುಣ್ಯ=ಪವಿತ್ರವಾದುದು/ಒಳಿತನ್ನುಂಟುಮಾಡುವುದು; ಅರ್ಚನೆ=ಪೂಜೆ; ಹೊಸ ಮನೆಯ ಪುಣ್ಯಾರ್ಚನೆಗೆ=ಹೊಸದಾಗಿ ಕಟ್ಟಿಸಿರುವ ಮನೆಯನ್ನು ಪ್ರವೇಶಿಸುವ ಸಮಯದಲ್ಲಿ ಮಾಡುವ ಪೂಜೆ; ಮಿಗೆ=ಹೆಚ್ಚಾಗಿ/ಅತಿಶಯವಾಗಿ; ಎಸೆ=ಎರಚುವ; ಸೇಸೆ=ಮಂಗಳಾಕ್ಷತೆ/ಮಂತ್ರಾಕ್ಷತೆ;

ಮದುಮಕ್ಕಳಿಗೆ=ಹಸೆಮಣೆ ಮೇಲೆ ನಿಂತಿರುವ ಗಂಡುಹೆಣ್ಣಿಗೆ; ವಸುಮತಿ=ಭೂಮಿ; ಈಶ=ಒಡೆಯ; ವಸುಮತೀಶ=ರಾಜ/ದೊರೆ; ಗರುಡಿ=ವ್ಯಾಯಾಮ ಶಾಲೆ; ಶಸ್ತ್ರ+ಅಸ್ತ್ರದ; ಶಸ್ತ್ರ=ಕತ್ತಿ, ಗದೆ, ಈಟಿ ಮುಂತಾದ ಹತಾರಗಳು; ಅಸ್ತ್ರ=ಬಾಣ; ಎಸೆ=ಕಂಗೊಳಿಸು; ವಿಪ್ರ=ಬ್ರಾಹ್ಮಣ; ಫಾಲ=ಹಣೆ/ ನೊಸಲು; ಗಂಧಾಕ್ಷತೆ=ತೇಯ್ದ ಗಂಧದ ಹಸಿಯೊಡನೆ ಬೆರೆತಿರುವ ಅಕ್ಕಿಕಾಳುಗಳು; ಅಹೆನು=ಆಗಿರುವೆನು;

ಭಾವಿಸು=ತಿಳಿದು ನೋಡು/ವಿಚಾರ ಮಾಡಿ ನೋಡು; ಇಂತು=ಈ ರೀತಿ; ಆರು=ಯಾರು; ಸರಿ=ಸಮಾನ/ಸಾಟಿ; ಧರಣಿ=ಭೂಮಿ; ಮಂತ್ರ=ದೇವರ ಮಹಿಮೆ ಮತ್ತು ಕರುಣೆಯ ಗುಣವನ್ನು ಕೊಂಡಾಡುವ ನುಡಿಗಳು; ತಂತ್ರ+ಉಚ್ಚರಣೆಯಲಿ; ತಂತ್ರ=ಪೂಜೆಯ ಸಮಯದಲ್ಲಿ ಮಾಡುವ ಬಗೆಬಗೆಯ ಕ್ರಿಯೆಗಳು; ಉಚ್ಚರಣೆ=ಹೇಳುವುದು/ನುಡಿಯುವುದು; ಹಸ್ತ+ಅಂಬುಜದಿ; ಹಸ್ತ=ಕಯ್;

ಅಂಬುಜ=ತಾವರೆ; ಮಿಗೆ=ಅತಿಶಯವಾಗಿ; ಹರಸು=ಒಳಿತಾಗಲೆಂದು ಹೇಳು; ಮಂಡೆ=ತಲೆ; ಆಂತ=ಹೊಂದಿದ/ಪಡೆದ; ಮಹಿಮ=ಹಿರಿಮೆಯುಳ್ಳವನು/ದೊಡ್ಡವನು; ದುರಿತ=ಪಾಪ/ಕೇಡು; ದುಃಖ=ಸಂಕಟ; ವಿನಾಶ=ಎಲ್ಲವೂ ಹಾಳಾಗುವುದು;

ಮಂಗಳಕರ+ಅಹುದು; ಸಂತತ=ಸದಾಕಾಲ; ಸಿರಿ=ಏಳಿಗೆ; ಸಂಪತ್ತು+ಆಯುವನು; ಆಯು=ಆಯುಸ್ಸು; ಈವೆ=ಕೊಡುತ್ತೇನೆ; ಪರಿಮಳ=ಕಂಪು/ಸುವಾಸನೆ ; ಚಂದನ=ಶ್ರೀಗಂಧ; ತರು=ಮರ ; ಕಾಷ್ಠ=ಕಟ್ಟಿಗೆ/ಕೊರಡು;

ಪರಿಮಳದ ಚಂದನದ ತರುವಿಗೆ ಸರಿಯೆ ಒಣಗಿದ ಕಾಷ್ಠ=ಸುವಾಸನೆಯಿಂದ ಕೂಡಿರುವ ಚಂದನದ ಮರಕ್ಕೆ ಒಣಗಿದ ಮರದ ತುಂಡು ಸಮಾನವೇ.;

ಗೋವು+ಅದು; ಹಾಲು+ಅಂತರವೆ; ಅಂತರ=ಸಾಟಿ/ಸಮಾನ ;

ಗೋವದು ಕರೆದ ಹಾಲಿಗೆ ಕುರಿಯ ಹಾಲಂತರವೆ=ಗೋವಿನ ಹಾಲಿಗೆ ಕುರಿಯ ಹಾಲು ಸಮಾನವೇ;

ಸಾಹಸ=ಪರಾಕ್ರಮ; ತಾನ್+ಅಂತರವೇ;

ಪರಮ ಸಾಹಸಿ ವೀರ ಹನುಮಗೆ ಮರದ ಮೇಲಣ ಕಪಿಯು ತಾನಂತರವೆ=ಮಹಾವೀರನಾದ ಹನುಮಂತನಿಗೆ ಮರದ ಮೇಲಣ ಕಪಿಯು ಸಮಾನವೇ;

ಫಡ=ತಿರಸ್ಕಾರ ಹಾಗೂ ಕೋಪವನ್ನು ಸೂಚಿಸುವಾಗ ಆಡುವ ಪದ; ಸುರನದಿ=ಗಂಗಾನದಿ; ಹಳ್ಳ=ಚಿಕ್ಕ ಪ್ರಮಾಣದಲ್ಲಿ ನೀರು ಹರಿಯುವುದು/ತೊರೆ;

ಸುರನದಿಗೆ ತಾ ಸರಿಯೆ ಕಾಡೊಳು ಹರಿವ ಹಳ್ಳದ ನೀರು=ಗಂಗಾನದಿಯ ನೀರಿಗೆ ಕಾಡಿನಲ್ಲಿ ಹರಿಯುವ ತೊರೆಯ ನೀರು ಸಮವೇ:

ಗರುಡ=ಒಂದು ಬಗೆಯ ಹಕ್ಕಿ. ಇದನ್ನು ದೇವರಾದ ವಿಷ್ಣುವಿನ ವಾಹನವೆಂಬ ಕಲ್ಪನೆಯು ಜನಮನದಲ್ಲಿದೆ. ಆದ್ದರಿಂದ ಈ ಹಕ್ಕಿಯನ್ನು ನೋಡಿದರೆ ಒಳಿತಾಗುವುದು ಎಂಬ ನಂಬಿಕೆಯು ಜನಮನದಲ್ಲಿದೆ; ಹದ್ದು=ಒಂದು ಬಗೆಯ ಹಕ್ಕಿ. ಹದ್ದು+ಅಂತರವೆ;

ಗರುಡನ ಮರಿಗೆ ಹದ್ದಂತರವೆ=ಗರುಡನ ಮರಿಗೆ ಹದ್ದು ಸಮಾನವೇ;

ಹಂಸ=ನೀರಿನಲ್ಲಿ ಹೆಚ್ಚಾಗಿ ಜೀವಿಸುವ ಒಂದು ಹಕ್ಕಿ; ಬಕ=ಕೊಕ್ಕರೆ ವರ್ಗಕ್ಕೆ ಸೇರಿದ ನೀರ ಹಕ್ಕಿ; ಹೋಲು=ಅದೇ ರೀತಿ ಕಾಣುವುದು;

ಹಂಸಗೆ ಬಕನು ಹೋಲುವುದೆ=ಹಂಸ ಹಕ್ಕಿಯ ಜೊತೆ ಬಕನನ್ನು ಹೋಲಿಸಬಹುದೇ;

ಸರಸ=ಚೆಲುವು/ಸೊಗಸು; ವಾಯಸ=ಕಾಗೆ; ಅಣಕ=ಅಪಹಾಸ್ಯ; ತೆರನ್+ಆಯ್ತು; ತೆರ=ರೀತಿ;

ಸರಸ ಮರಿ ಕೋಗಿಲೆಗೆ ವಾಯಸನು ಅಣಕಿಸುವ ತೆರನಾಯ್ತು=ಕೋಗಿಲೆಯ ಚೆಲುವಾದ ಮರಿಯನ್ನು ಕಪ್ಪನೆಯ ಬಣ್ಣದ ಕಾಗೆಯು ಅಣಕಿಸುವ ರೀತಿಯಾಯಿತು;

"ಪರಿಮಳದ ಚಂದನದ ತರು/ಒಣಗಿದ ಮರದ ತುಂಡು; ಹಸುವಿನ ಹಾಲು/ಕುರಿಯ ಹಾಲು; ವೀರ ಹನುಮ/ಮರದ ಮೇಲಣ ಕೋತಿ; ಗಂಗಾನದಿಯ ನೀರು/ಕಾಡಿನ ಹಳ್ಳದ ನೀರು; ಗರುಡ/ಹದ್ದು; ಹಂಸ/ಬಕ; ಕೋಗಿಲೆಯ ಮರಿ/ಕಾಗೆ"... ಈ ಎರಡು ಬಗೆಯ ವಸ್ತುಗಳನ್ನು ಮತ್ತು ಜೀವಿಗಳನ್ನು ಪರಸ್ಪರ ಹೋಲಿಸುತ್ತಾ, ಒಂದರ ರೂಪ ಮತ್ತು ಗುಣವನ್ನು ಹಾಡಿಹೊಗಳುತ್ತಾ, ಮತ್ತೊಂದರ ರೂಪ ಮತ್ತು ಗುಣವನ್ನು ಕಡೆಗಣಿಸುವ ನುಡಿಗಳು ನಮ್ಮ ಸಮಾಜದ ಮೇಲು ಕೀಳಿನ ಮೆಟ್ಟಲುಗಳಿಂದ ಕೂಡಿರುವ ಜಾತಿ ವ್ಯವಸ್ಥೆಯನ್ನು ಮತ್ತು ಅದರಿಂದ ರೂಪುಗೊಂಡಿರುವ ತಾರತಮ್ಯದ ನಿಲುವನ್ನು ಸೂಚಿಸುವ ರೂಪಕಗಳಾಗಿ ಚಿತ್ರಣಗೊಂಡಿವೆ;

ಮೇಲು ಕೀಳಿನ ಜಾತಿ ವ್ಯವಸ್ಥೆಯಿಂದ ಕೂಡಿರುವ ಸಮಾಜದಲ್ಲಿ ಹುಟ್ಟಿ ಬೆಳೆಯುವ ಜನಸಮುದಾಯದ ಮನದಲ್ಲಿ ತಮ್ಮ ಕಣ್ಣ ಮುಂದಿನ ವಸ್ತು ಮತ್ತು ಪ್ರಾಣಿಪಕ್ಷಿಗಳ ಬಗ್ಗೆಯೂ ಮೇಲು ಕೀಳಿನ ಒಳಮಿಡಿತಗಳು ನೆಲೆಗೊಂಡಿವೆ.

ಕಣ್ಣ ಮುಂದಿನ ನಿಸರ್ಗದಲ್ಲಿರುವ ಪ್ರತಿಯೊಂದು ವಸ್ತು ಮತ್ತು ಜೀವಿಗಳು ಒಂದಕ್ಕಿಂತ ಒಂದು ಬೇರೆಯಾದ ರೂಪ ಮತ್ತು ಗುಣವನ್ನು ಹೊಂದಿವೆ, ಆದರೆ ಪ್ರತಿಯೊಂದಕ್ಕೂ ತನ್ನದೇ ಒಂದು ಅಸ್ತಿತ್ವವಿದೆ ಎಂಬ ಅರಿವನ್ನು ಪಡೆಯದ ರೀತಿಯಲ್ಲಿ ಮೇಲು ಕೀಳಿನ ನಿಲುವು ಜನರ ಮಯ್ ಮನದಲ್ಲಿ ನೆಲೆಗೊಂಡಿದೆ.

ಜಾತಿ ವ್ಯವಸ್ಥೆಯನ್ನು ರೂಪಿಸಿ ವಿದ್ಯೆ, ಸಂಪತ್ತು ಮತ್ತು ಆಡಳಿತದ ಗದ್ದುಗೆಯನ್ನು ಹಿಡಿದಿರುವ ಮೇಲು ಜಾತಿ ಮತ್ತು ಮೇಲು ವರ್ಗದ ಜನಸಮುದಾಯವು ದುಡಿಯುವ ವರ್ಗಕ್ಕೆ ಸೇರಿದ ಕೆಳಜಾತಿ ಮತ್ತು ಕೆಳವರ್ಗದ

ಜನಸಮುದಾಯದ ಬಗ್ಗೆ ಇದೇ ರೀತಿಯಾದ ತಿರಸ್ಕಾರವನ್ನು ಹೊಂದಿದೆ ಎಂಬುದನ್ನು ಈ ನುಡಿಗಳು ಸೂಚಿಸುತ್ತಿವೆ;

ನೀನ್+ಆವ; ಮಾನ್ಯ=ಮನ್ನಣೆಯನ್ನು ಪಡೆದ ವ್ಯಕ್ತಿ; ನೀನಾವ ಮಾನ್ಯನು=ನಿನಗೆ ಎಂತಹ ಮನ್ನಣೆಯಿದೆ. ಅಂದರೆ ಯಾವುದೇ ಮನ್ನಣೆಯಿಲ್ಲದ ಅತಿ ಸಾಮಾನ್ಯನು ನೀನು;

ಕನಲಿ=ಕೋಪಗೊಂಡು; ಕಿಡಿ=ಬೆಂಕಿಯ ಕಣ; ಮಸಗು=ಹೊರಹೊಮ್ಮು; ಖತಿ=ಕೋಪ; ಘರ್ಜನೆ+ಅಂತೆ; ಘರ್ಜನೆ=ಗಟ್ಟಿಯಾದ ದನಿ/ಅಬ್ಬರದ ದನಿ; ಜರೆ=ನಿಂದಿಸು/ತೆಗಳು/ಬಯ್ಯುವುದು; ಹೇಸು=ಅಸಹ್ಯಪಡು; ಭಂಡ=ನಾಚಿಕೆಯಿಲ್ಲದವನು;

ನುಡಿಗೆ ಹೇಸದ ಭಂಡ=ಎಲ್ಲಿ ಯಾವಾಗ ಹೇಗೆ ಮಾತನಾಡಬೇಕೆಂಬುದನ್ನು ತಿಳಿಯದೆ, ಬಾಯಿಗೆ ಬಂದಂತೆ ಮಾತನಾಡುವ ನೀಚ ವ್ಯಕ್ತಿ/ ತಾನಾಡುವ ಮಾತುಗಳು ಬೇರೆಯವರ ಮನಸ್ಸಿಗೆ ಅರಿವು ಮತ್ತು ಆನಂದವನ್ನು ನೀಡುವಂತಿರಬೇಕೆ ಹೊರತು ಬೇರೆಯವರ ಮನಸ್ಸನ್ನು ನೋಯಿಸುವಂತೆ ಇರಬಾರದು ಎಂಬ ವಿವೇಕವಿಲ್ಲದೆ ಮಾತನಾಡುವ ವ್ಯಕ್ತಿ;

ಮಾರುತ್ತರ=ಒಬ್ಬರು ಆಡಿದ ಮಾತಿಗೆ ಎದುರಾಗಿ ಮಾತನಾಡುವುದು/ ಒಬ್ಬರು ಆಡಿದ ಮಾತನ್ನು ಅಲ್ಲಗಳೆದು ಮಾತನಾಡುವುದು;

ನಿನ್ನೊಳು ಮಾರುತ್ತರವ ಕೊಡುವರೇ=ನಿನ್ನಂತಹ ನೀಚನೊಡನೆ ಮಾತನಾಡಲೇಬಾರದು; ಕಡು=ಬಹಳ/ಅತಿ; ಜಡ=ಜೀವವಿಲ್ಲದ ವಸ್ತು ; ಕಡುಜಡ=ಇದೊಂದು ನುಡಿಗಟ್ಟು, ಒಳ್ಳೆಯದಕ್ಕೆ ಬೆಲೆ ಕೊಡದ ಮತ್ತು ಒಳ್ಳೆಯದನ್ನು ಒಪ್ಪಿಕೊಳ್ಳದ ಮನಸ್ಸಿನವನು/ವಾಸ್ತವವನ್ನು ಅರಿಯದ ಮತ್ತು ವಾಸ್ತವವನ್ನು ಕಡೆಗಣಿಸುವ ವ್ಯಕ್ತಿ;

ಸತ್ಯಹೀನ=ದಿಟವೇನೆಂಬುದನ್ನು ತಿಳಿಯದವನು/ವಾಸ್ತವವನ್ನು ಅರಿಯದವನು; ಕಣ್ಣೆತ್ತಿ ನೋಡು=ಇದೊಂದು ನುಡಿಗಟ್ಟು, ಕರುಣೆಯಿಂದ ಕಾಣು/ ಇತರರ ಸಂಕಟವನ್ನು ಗಮನಿಸು; ಧನಾಢ್ಯ=ಸಿರಿವಂತ; ಬೆಂಬತ್ತು=ಹಿಂಬಾಲಿಸು; ಅಪೇಕ್ಷೆ=ಬಯಕೆ; ಹೇಳಲ್+ಏನು; ಹೆತ್ತ=ಮಗುವನ್ನು ಹಡೆದ; ಬಾಣಂತಿ=ಮಗುವನ್ನು ಹಡೆದ ನಾಲ್ಕಾರು ತಿಂಗಳ ಕಾಲ ಆರೈಕೆಗೆ ಒಳಗಾಗಿರುವ ಹೆಂಗಸು; ಪಥ್ಯ/ಪತ್ಯ=ವ್ಯಕ್ತಿಗೆ ರೋಗ ಬಂದ ಸಮಯದಲ್ಲಿ ವೈದ್ಯರು ಹೇಳಿದಂತಹ ಆಹಾರವನ್ನು ಮಾತ್ರ ತೆಗೆದುಕೊಳ್ಳುವುದು; ನೀನ್+ಅಹೆ; ಅಹೆ=ಆಗಿರುವೆ;

ಹೆಣ=ಜೀವವಿಲ್ಲದ ದೇಹ; ತುತ್ತು=ಆಹಾರವನ್ನು ಸೇವಿಸುವಾಗ ಒಂದು ಸಲಕ್ಕೆ ಬಾಯಿ ಹಿಡಿಸುವಷ್ಟು ಆಹಾರವನ್ನು ಕಯ್ಯಲ್ಲಿ ತೆಗೆದುಕೊಳ್ಳುವುದು; ಜನ್ಮ=ಹುಟ್ಟು; ನಿರರ್ಥಕರ=ಪ್ರಯೋಜನವಿಲ್ಲದ್ದು; ಸತ್ತದಿನದಾರಭ್ಯ=ಸತ್ತ ದಿನದಿಂದ ತೊಡಗಿ; ಮನುಜ=ಮಾನವ/ವ್ಯಕ್ತಿ; ಕರ್ಮ=ಬಹುಬಗೆಯ ಆಚರಣೆ;

ಕರ್ಮವ ಹೊತ್ತು=ವ್ಯಕ್ತಿಯು ಸತ್ತ ನಂತರ ಅವರನ್ನು ಮಣ್ಣಿನಲ್ಲಿ ಹೂಳಿ ಇಲ್ಲವೇ ಬೆಂಕಿಯಿಂದ ಸುಟ್ಟು, ಅವರಿಗೆ ಪರಲೋಕದಲ್ಲಿ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಮುಂದಿನ ಮೂರು/ಏಳು/ಹನ್ನೊಂದನೆಯ ದಿನದ ವರಗೆ ಮಾಡುವ ಆಚರಣೆಗಳ ಜವಾಬ್ದಾರಿಯನ್ನು ಹೊತ್ತು; ಪಿಂಡವನ್+ಇತ್ತು;

ಪಿಂಡ=ಅನ್ನದ ಉಂಡೆ/ಸತ್ತವರಿಗೆ ತಿಥಿಯನ್ನು ಮಾಡುವಾಗ ಹೆಣವನ್ನು ಹೂಳಿರುವ ಇಲ್ಲವೇ ಸುಟ್ಟಿರುವ ಜಾಗದಲ್ಲಿ ಇಡುವ ಅನ್ನದ ಉಂಡೆ; ತುತ್ತನ್+ಇಡುವರು; ತಪ್ಪದೆ=ಬಿಡದೆ/ಒಂದೇ ಸಮನೆ; ವಾಯಸ=ಕಾಗೆ; ಕುಲ=ಗುಂಪು; ತುತ್ತನು+ಇಡುವರು;

ವಾಯಸ ಕುಲವ ಕರೆಕರೆದು ತುತ್ತನಿಡುವರು=ಹೆಣದ ಗುದ್ದದ ಮೇಲೆ ಅನ್ನದ ಉಂಡೆಯ ಜತೆಜತೆಗೆ ಬಗೆಬಗೆಯ ಉಣಿಸು ತಿನಸುಗಳನ್ನಿಟ್ಟು ಪೂಜಿಸಿದ ನಂತರ, ಅವೆಲ್ಲವನ್ನೂ ಕಾಗೆಗಳು ಬಂದು ತಿಂದರೆ ಸತ್ತವರ ಜೀವಕ್ಕೆ ನೆಮ್ಮದಿ ದೊರೆಯುವುದು ಮತ್ತು ಸ್ವರ್ಗ ದೊರೆಯುವುದೆಂಬ ನಂಬಿಕೆಯು ಜನಮನದಲ್ಲಿದೆ;

ದರ್ಭೆ=ಗರಿಕೆ ಹುಲ್ಲಿನ ಇಲ್ಲವೇ ಇನ್ನಿತರ ಪಯಿರನ ಎಸಳು; ತೆತ್ತಿಗ=ಆಳು/ಸೇವಕ ; ನೀನ್+ಆದೆ;

ಎಳ್ಳು ದರ್ಭೆಗೆ ತೆತ್ತಿಗನು ನೀನಾದೆ=ತಿಥಿಯನ್ನು ಮಾಡುವಾಗ ಎಳ್ಳಿನಿಂದ ಮಾಡಿದ ಉಂಡೆಗಳನ್ನು ಕಟ್ಟಿ, ಹುಲ್ಲಿನ ಎಳೆಗಳಿಂದ ಕೂಡಿದ ಸಣ್ಣಕಟ್ಟನ್ನು ಕಟ್ಟಿ, ಅದರಿಂದ ಹಾಲು ಇಲ್ಲವೇ ನೀರನ್ನು ಅನ್ನದ ಮತ್ತು ಎಳ್ಳಿನ ಉಂಡೆಗಳ ಮೇಲೆ ಚಿಮುಕುಸುತ್ತ ಸತ್ತವರನ್ನು ಪೂಜಿಸುತ್ತಾರೆ.

ಕೀರ್ತಿ=ವರದಿ/ಹೇಳಿಕೆ; **ಕೀರ್ತಿಯ ಹೊತ್ತುಕೊಂಡೆ**=ವ್ಯಕ್ತಿಯ ಸತ್ತ ನಂತರ ಮಾಡುವ ತಿಥಿಯ ಕಾರ್ಯದ ಆಚರಣೆಗಳಲ್ಲಿ ಬಳಕೆಯಾಗುತ್ತಿರುವೆ; ವ್ಯಕ್ತಿಯು ಜೀವಂತವಾಗಿರುವಾಗ ಹಸಿವನ್ನು ತಣಿಸಲು ದೊರಕದ ನೀನು, ಸತ್ತ ನಂತರ ಬಳಕೆಗೆ ಬರುವೆ. ಇಂತಹ ಕೀರ್ತಿಯು ನಿನ್ನದು ಎಂಬ ಅಣಕದ ದನಿಯು ಈ ನುಡಿಯಲ್ಲಿದೆ;

ಮಾತು+ಅದು; ದುರಾತ್ಮ=ಕೆಟ್ಟ ನಡೆನುಡಿಯುಳ್ಳ ವ್ಯಕ್ತಿ; ತೆಗೆ=ಮರೆಯಾಗು/ತಡೆ; ಮಳೆ ತೆಗೆದು=ಮಳೆ ಸುರಿಯದೆ; ಅಡಗು=ಕೊನೆಗೊಳ್ಳು; ಬೆಳೆ ಅಡಗಿ=ಬೆಳೆಯಾಗದೆ; ಕ್ಷಾಮ=ಬರಗಾಲ/ಉಣ್ಣುವುದಕ್ಕೆ ಆಹಾರವಿಲ್ಲದೆ, ಕುಡಿಯುವುದಕ್ಕೆ ನೀರಲ್ಲದೆ ಜೀವಿಗಳು ಹಸಿವು ಬಾಯಾರಿಕೆಯಿಂದ ಸಂಕಟಪಡುವ ಕಾಲ;

ವಿಲಯ=ನಾಶ; ವಿಲಯಕಾಲ=ಜಗತ್ತಿನ ಜೀವರಾಶಿಗಳೆಲ್ಲವೂ ಹಸಿವಿನ ಸಂಕಟದಿಂದ ನರಳುತ್ತ ಸಾವನ್ನಪ್ಪುವ ಕಾಲ; ಅಳಿ=ನಾಶ; ಜಗ+ಅರಿಯೆ; ಅರಿ=ತಿಳಿ; ಆದರ=ಒಲವು ನಲಿವಿನ ನಡೆನುಡಿ; ಸಲಹು=ಕಾಪಾಡು; ಎಲ್ಲಿ+ಇಹೆಯೊ; ಇಹೆಯೊ=ಇರುವೆಯೊ; ಬಳಗ+ಅದು; ಬಳಗ=ಗುಂಪು/ಸಮೂಹ/ನೆಂಟರಿಷ್ಟರು; ಎಲ್ಲಿ+ಇಹುದು;

ಹುಲು=ಸಾಮಾನ್ಯ/ಅಲ್ಪ; ಸರಿದೊರೆ=ಸರಿಜೋಡಿ/ಸರಿಸಮಾನ; ಬಲ್ಲಿದ=ಸಿರಿವಂತ ; ನಿನ್ನಲ್ಲಿ+ಉಂಟು; ಉಂಟು=ಇದೆ; ಉಪೇಕ್ಷೆ=ಅಸಡ್ಡೆ/ತಿರಸ್ಕಾರ; ಸಲ್ಲು=ಸಮ್ಮತವಾಗು/ಒಪ್ಪಿಗೆಯಾಗು; ಪರಿ=ರೀತಿ; ಪಕ್ಷಪಾತ+ಅದು+ಇಲ್ಲ; ಪಕ್ಷಪಾತ=ಒಬ್ಬರಿಗೆ ಒಳಿತನ್ನು ಮಾಡಿ ಮತ್ತೊಬ್ಬರಿಗೆ ಕೇಡನ್ನು ಬಗೆಯುವುದು/ಒಬ್ಬರನ್ನು ಹೆಚ್ಚು ಒಲವಿನಿಂದ ಕಂಡು ಮತ್ತೊಬ್ಬರನ್ನು ಸಂಪೂರ್ಣವಾಗಿ ಕಡೆಗಣಿಸುವುದು; ಭಾವಿಸು=ವಿಚಾರಮಾಡಿ ನೋಡು/ತಿಳಿದು ನೋಡು; ಬಡವರುಗಳು+ಎನ್ನದೆ; ರಕ್ಷಿಸು=ಕಾಪಾಡು/ಸಲಹು;ನಿರ್ದಯ=ದಯೆಯಿಲ್ಲದ ನಡೆನುಡಿ;

ಕುಟಿಲ=ವಂಚಕ/ಮೋಸಗಾರ; ಕುಟಿಲಾತ್ಮ=ಮೋಸ ಮಾಡುವ ನಡೆನುಡಿಯುಳ್ಳವನು/ಕೆಟ್ಟವನು; ನಾನ್+ಎಲ್ಯೆ; ನಾನೆಲ್ಯೆ=ನಾನೇನೋ:

ನಾನೆಲ್ಯೆ ಲೋಕದಲಿ ನಿರ್ದಯನು=ನಾನು ಕರುಣೆಯಿಲ್ಲದವನೇನೋ!...

ಬಳಿಕ+ಏನಲ್ಯೆ; **ಬಳಿಕೇನಲ್ಯೆ**=ಇನ್ನೇನೋ...ನೀನು ನಿಜವಾಗಿಯೂ ನಿರ್ದಯನು; ಸದ್ಧರ್ಮ=ಒಳ್ಳೆಯ ಧರ್ಮ; ಮಧುಪಾನ+ಆದೆಯಲಾ; ಮಧುಪಾನ=ಕಳ್ಳು ಹೆಂಡ ಮುಂತಾದ ಮಾದಕ ಪಾನೀಯಗಳ ಸೇವನೆ; ಸದ್ಧರ್ಮದಲಿ ಮಧುಪಾನವಾದೆ=ದೇವರು ಧರ್ಮದ ಹೆಸರಿನಲ್ಲಿ ನಡೆಯುವ ಆಚರಣೆಗಳ ಸಂದರ್ಭದಲ್ಲಿ ಅಕ್ಕಿಯಿಂದ ತಯಾರಿಸಿದ ಮದ್ಯವನ್ನು ಕೆಲವರು

ಕುಡಿಯುತ್ತಾರೆ. ಕುಡಿದವರಿಗೆ ಮತ್ತನ್ನು ತರಿಸುವ ಈ ಮಾದಕ ಪಾನೀಯವನ್ನು **‘ಅಕ್ಕಿ ಬೋಜ’** ಎಂಬ ಹೆಸರಿನಿಂದ ಕರೆಯುತ್ತಾರೆ. ದುರಾತ್ಮಕ=ಕೆಟ್ಟ ವ್ಯಕ್ತಿ; ಸೇವಿಸು=ಉಣ್ಣು/ಕುಡಿ; ಕಿರಾತರು=ಕಾಡಿನಲ್ಲಿ ನೆಲೆಸಿರುವ ಒಂದು ಬುಡಕಟ್ಟಿನ ಜನರು; ಜ್ಞಾನ+ಅಳಿದು; ಜ್ಞಾನ=ತಿಳುವಳಿಕೆ; ಅಳಿದು=ಇಲ್ಲವಾಗಿ; ವಿಕಾರ=ಕೆಟ್ಟ ರೀತಿಯಲ್ಲಿ ಬದಲಾಗುವುದು; ಮತಿಹೀನರು+ಆದರು; ಮತಿಹೀನ=ತಿಳಿಗೇಡಿ;

ಜ್ಞಾನವಳಿದು ವಿಕಾರದಲಿ ಮತಿಹೀನರಾದರು=ಎಲೈ ವ್ರಿಹಿಗ...ನಿನ್ನಿಂದ ತಯಾರಿಸಿದ ಮಾದಕ ಪಾನೀಯವನ್ನು ಸೇವಿಸಿದ ವ್ಯಕ್ತಿಗಳೆಲ್ಲರೂ ಕುಡಿತದ ಅಮಲಿನಲ್ಲಿ ಒಳಿತು ಕೆಡುಕಿನ ವಿವೇಚನೆಯನ್ನು ಕಳೆದುಕೊಂಡು ತಿಳಿಗೇಡಿಗಳಾದರು;

ಗುಣ+ಏನು; ಗುಣ=ನಡವಳಿಕೆ/ನಡತೆ; ಅತಿಶಯ=ಹೆಚ್ಚುಗಾರಿಕೆ;

ಪಿತೃ=ತಂದೆ; ನಾಮ=ಹೆಸರು; ಪಿತೃನಾಮ=ಇಲ್ಲಿ ಈ ಪದ ಒಂದು ನುಡಿಗಟ್ಟಾಗಿ ಬಳಕೆಯಾಗಿದೆ. ಒಂದು ಕುಟುಂಬದಲ್ಲಿ ಸಾವನ್ನಪ್ಪಿರುವ ತಂದೆ, ತಾತ, ಮುತ್ತಾತ ಮುಂತಾದವರ ಹೆಸರುಗಳು; ನಿನಗೆ+ಇತ್ತು; ನಿನಗೆ=ಅನ್ನದ ಉಂಡೆಯ ರೂಪದಲ್ಲಿರುವ ಪಿಂಡಕ್ಕೆ; ಇತ್ತು=ನೀಡಿ/ಹೆಸರಿಸಿ; ನೆತ್ತಿ=ತಲೆ; ಬಡಿ=ಹೊಡೆದು; ಪಶು=ಹಸು; ತುತ್ತನು+ಇಡುವರು; ಎತ್ತು=ಹುಟ್ಟು/ಜನ್ಮ; ತನು=ದೇಹ;

ಆಡಬಹುದೇ ಅತಿಶಯ=ಇಲ್ಲದ್ದನ್ನು ಇದೆಯೆಂದು ಹೊಗಳಿಕೊಳ್ಳುವುದು ಸರಿಯೇ.

ಕೊಂಡಾಡು=ಹೊಗಳು; ಕೊಂಬರೆ=ಕೊಳ್ಳುತ್ತಾರೆಯೆ;

ನೀ ಕೊಂಡಾಡಿ ಕೊಂಬರೆ=ನಿನ್ನನ್ನು ನೀನೇ ಹೊಗಳಿಕೊಳ್ಳುವುದೇ:

ಸಜ್ಜನರು+ಆಡಿದರೆ; ಸಜ್ಜನ=ಒಳ್ಳೆಯವರು; ಪತಿಕರಿಸು=ಹೊಗಳು/ಮೆಚ್ಚು/ಕೊಂಡಾಡು; ಆಡು=ಹೇಳು/ನುಡಿ; ಲಜ್ಜೆ=ನಾಚಿಕೆ; ಸಿರ=ತಲೆ; ಬಾಗು=ಬಗ್ಗಿಸು;

ನೋಡಿರೈ=ನೋಡುವಂತಹವರಾಗಿ. ಈಗ ರಾಮನನ್ನು ಸುತ್ತುವರಿದಿದ್ದವರೆಲ್ಲರನ್ನೂ ಕುರಿತು ನರೆದಲೆಗ ಮಾತನಾಡತೊಡಗುತ್ತಾನೆ; ದುರ್ಮತಿ+ಕೇಡಿ; ದುರ್ಮತಿ=ಕೆಟ್ಟ ಮನಸ್ಸಿನವನು; ಕೇಡಿ=ಇತರರ

ಮಾನಪ್ರಾಣಗಳಿಗೆ ಅಪಾಯುವನ್ನು/ಹಾನಿಯುನ್ನು ಮಾಡುವವನು; ಇವನ್+ಆಡುವುದ; ಆಡುವುದ=ಹೇಳುವುದನ್ನು; ನಾವು+ಇನ್ನು+ಆಡಿದರೆ; ಆಡಿದರೆ=ಮಾತನಾಡಿದರೆ; ಹುರುಳು+ಇಲ್ಲ; ಹುರುಳು=ಸಾರ/ತಿರುಳು; ಪ್ರತಿಬಿಂಬರೂಪ=ಯಾವುದೇ ವಸ್ತು/ಜೀವಿಯ ಆಕಾರದಂತೆಯೇ ಮತ್ತೊಂದು ನಿರ್ಮಾಣಗೊಂಡಿರುವುದು; ಬಿತ್ತರಿಸು=ಅಣಿಮಾಡು/ತಯಾರುಮಾಡು;

ಸಜ್ಜನರಾಡಿದರೆ ಪತಿಕರಿಸೆ ಲಜ್ಜೆಗೆ ಸಿರವ ಬಾಗುವರು=ಒಳ್ಳೆಯವರ ಬಗ್ಗೆ ಇತರರು ಹೊಗಳಿಕೆಯ ಮಾತನಾಡಿದರೆ, ಅಗ ಅವರು ನಾಚಿಕೆಯಿಂದ ತಲೆಯನ್ನು ತಗ್ಗಿಸುವರು. ಅಂದರೆ ಇವನ ಹಾಗೆ ಸಜ್ಜನರು ಅಹಂಕಾರದಿಂದ ಮೆರೆಯುವುದಿಲ್ಲ;

ಏನ್+ಇಹಿರಿ; ಇಹಿರಿ=ಇರುವಿರಿ; ಹಿರಿ=ದೊಡ್ಡದು; ಕಿರಿ=ಚಿಕ್ಕದು; ಮೌನ+ದೀಕ್ಷಿತರು+ಆದಿರಲ; ಮೌನ=ಏನನ್ನೂ ಮಾತನಾಡದೆ ಸುಮ್ಮನಿರುವುದು; ದೀಕ್ಷಿತ=ವ್ರತವನ್ನು ಕಯ್ಗೊಂಡವರು;

ಮೌನದೀಕ್ಷಿತರು=ತಮ್ಮ ಕಣ್ಣಮುಂದೆ ಏನೇ ನಡೆಯುತ್ತಿರಲಿ ಬಾಯನ್ನು ಬಿಡದೆ ಸುಮ್ಮನಿರುವ ವ್ಯಕ್ತಿಗಳು; ಆದಿರಲ=ಆಗಿದ್ದೀರಲ್ಲ;

ಕಂಡು+ಏನು; ಮುರಿದು+ಆಡುವಿರಿ; ಮುರಿ=ಕಡೆಗಣಿಸಿ/ತಿರಸ್ಕರಿಸಿ/ಕಳೆ; ಆಡುವಿರಿ=ಮಾಡುತ್ತಿರುವಿರಿ;

ಕಂಡು ಏನು ಮುರಿದಾಡುವಿರಿ=ನೋಡುತ್ತಿದ್ದರೂ ಯಾವ ಮಾತುಗಳನ್ನು ಆಡದೆ ಸುಮ್ಮನಿದ್ದೀರಿ;

ಅಸಾಧ್ಯ=ಯಾವುದೇ ಕೆಲಸವನ್ನು ಮಾಡಲಾಗದು; ಸಾಧ್ಯ=ಯಾವುದೇ ಕೆಲಸವನ್ನು ಮಾಡುವುದು;

ನಿಮಗೆ ಅಸಾಧ್ಯವೊ ಸಾಧ್ಯವೋ=ನಿಮ್ಮಿಂದ ಈ ಸಮಸ್ಯೆಯನ್ನು ಅಂದರೆ ನಮ್ಮಿಬ್ಬರಲ್ಲಿ ಯಾರು ಹೆಚ್ಚು ಯಾರು ಕಡಿಮೆ ಎಂಬುದನ್ನು ತೀರ್ಮಾನಿಸಲು ಆಗುತ್ತದೆಯೋ ಇಲ್ಲವೋ ತಿಳಿಸಿ;

ನಪುಂಸಕ=ಇತ್ತ ಗಂಡೂ ಅಲ್ಲದ ಅತ್ತ ಹೆಣ್ಣೂ ಅಲ್ಲದ ಮಾನವ ಜೀವಿ. ಈ ಪದ ಒಂದು ನುಡಿಗಟ್ಟಾಗಿ ಬಳಕೆಗೆ ಬಂದಿದೆ. ಕೆಲಸಕ್ಕೆ ಬಾರದ ವ್ಯಕ್ತಿ/ಬಲಹೀನ ಎಂಬ ತಿರುಳಿನಲ್ಲಿ ಬಳಕೆಯಾಗಿದೆ;

ನಿರಂತರ+ಏನು; ನಿರಂತರ=ಒಂದೇ ಸಮನೆ; ವಾದ+ಇದು; ವಾದ=ಚರ್ಚೆ;

ಈ ನಪುಂಸಕನಲಿ ಏನು ಕಾರಣ ನಿರಂತರ ವಾದವಿದು=ಕೆಳಮಟ್ಟದ ಇಂತಹ ವ್ಯಕ್ತಿಯೊಡನೆ ನಾನೇಕೆ ವಾದವನ್ನು ಮಾಡಲಿ. ಅಂದರೆ ಇವನೊಡನೆ ಮಾತಿಗೆ ಮಾತನ್ನಾಡುವುದರಿಂದ ಯಾವುದೇ ಪ್ರಯೋಜನವಿಲ್ಲ;

ಅರುಹು=ತಿಳಿಸು; ಮಸೆ=ತೀವ್ರಗೊಳ್ಳು/ಉದ್ರೇಕ/ಆವೇಶ/ಹುರುಡು; ಇತ್ತಂಡ=ಎರಡು ಕಡೆಯ ತಂಡದವರು; ಮತ್ಸರ=ಹಗೆತನ/ಹೊಟ್ಟೆಕಿಚ್ಚು; ಪಿಸುಣ=ಚಾಡಿಕೋರ; ಬಲರು=ಶಕ್ತಿಯುಳ್ಳವರು/ಕಸುವುಳ್ಳವರು; ಅತಿ=ಬಹಳ; ನಿಷ್ಠುರರು=ಒರಟರು;

ಪಿಸುಣ>ಹಿಸುಣ=ಚಾಡಿಕೋರ; ಇವದಿರ=ಇವರನ್ನು; ಮಾಣ್=ನಿಲ್ಲಿಸು; ಹದನು+ಏನು; ಹದನು=ರೀತಿ/ಕ್ರಮ: ನಮಗೆ+ಈ+ನ್ಯಾಯುವನು; ಪರಿಹರಿಸು=ಬಗೆಹರಿಸು/ನಿವಾರಿಸು; ಅಳವು+ಅಲ್ಲ; ಅಳವು=ಶಕ್ತಿ/ಕಸುವು; ಹರಿ+ಹರ+ವಿರಿಂಚಿ+ಆದ್ಯರನು; ಹರಿ=ವಿಷ್ಣು; ಹರ=ಶಿವ; ವಿರಿಂಚಿ=ಬ್ರಹ್ಮ; ಆದ್ಯರು=ಮೊದಲಾದವರು; ಇವರ=ನರೆದಲೆಗ ಮತ್ತು ವ್ರಿಹಿಗ–ಇವರಿಬ್ಬರ; ಗುಣ=ಯೋಗ್ಯತೆ; ನಯ=ನಾಜೂಕು; ಆಧರಿಸಿ=ಅವಲಂಬಿಸಿ/ಆಶ್ರಯಿಸಿ;

ಪೌರುಷ=ಕೆಚ್ಚು; ಗಮನಿಸಿ=ತೆರಳಿರಿ; ಸೆರೆ=ಬಂಧನ; ನೂಕಿ=ತಳ್ಳಿ; ಸಿರಿ=ಐಶ್ವರ್ಯ; ಮದ=ಸೊಕ್ಕು/ಗರ್ವ; ಸಿರಿಯ ಮದ=ರಾಜತನದ ಗದ್ದುಗೆಯಲ್ಲಿ ಕುಳಿತಾಗ ಸಹಜವಾಗಿಯೇ ಬರುವ ಆಡಳಿತದ ಸೊಕ್ಕು; ಕಳೆ=ಬಿಡು/ನಾಶ ಮಾಡು; ಹೊರತಾಗಿ=ಉಳಿದು/ಬಿಟ್ಟು; ಎಮ್ಮನು=ನಮ್ಮನ್ನು; ಮರದು=ನೆನಪಿನಲ್ಲಿಟ್ಟುಕೊಳ್ಳದೆ; ಆರು=ಯಾರು; ಧರೆ=ಭೂಮಿ; ಅಪಕೀರ್ತಿ=ಕೆಟ್ಟ ಹೆಸರು; ನಾರಿ=ಹೆಣ್ಣು;

ಅಪಕೀರ್ತಿ ನಾರಿಯ ಸೆರಗ ಹಿಡಿವುದು=ಇದೊಂದು ನುಡಿಗಟ್ಟು, ವ್ಯಕ್ತಿಯು ತನ್ನ ನಡೆನುಡಿಗಳಿಂದಲೇ ಕೆಟ್ಟ ಹೆಸರನ್ನು ಪಡೆಯುವುದು; ಲೇಸು=ಒಳ್ಳೆಯದು;

ಅಪಕೀರ್ತಿ ನಾರಿಯ ಸೆರಗ ಹಿಡಿವುದು ಲೇಸು=ಎಲ್ಲರ ಮುಂದೆ ಈ ರೀತಿ ನಾನು ಮತ್ತು ವ್ರಿಹಿಗನು ಒಬ್ಬರನ್ನೊಬ್ಬರು ನಿಂದಿಸಿಕೊಂಡು ನಮಗೆ ಕೆಟ್ಟ ಹೆಸರನ್ನು ತಂದುಕೊಂಡೆವು ಎಂಬ ಸಂಕಟದ ದನಿಯು ಈ ನುಡಿಗಳಲ್ಲಿದೆ.

ತವೆ=ಅತಿಶಯವಾಗಿ/ಹೆಚ್ಚಾಗಿ; ಕರ=ಕಯ್;

ತಲೆ+ಕುತ್ತಿ; ಕುತ್ತು=ಬಗ್ಗು; ತಲೆಗುತ್ತಿ=ತಲೆತಗ್ಗಿಸಿ;

“ಆಗಲಿ ಅದಕೇನು” ಎಂದು ರಾಮನು ಆಡಿದ ಮಾತುಗಳು “ನರೆದಲೆಗನ

ಮನದ ಅಳುಕನ್ನು ನಿವಾರಿಸಿ, ನಾನು ನಿಮ್ಮನ್ನು ಮರೆಯುವುದಿಲ್ಲ... ನಿಮ್ಮನ್ನು ಕಾಪಾಡುತ್ತೇನೆ." ಎಂಬ ಭರವಸೆಯ ನುಡಿಗಳಾಗಿವೆ.

ಯೋಗಿ=ತಪಸ್ವಿ/ರಿಸಿ; ವಶವಮಾಡಿ=ವಶಕ್ಕೆ ಕೊಟ್ಟು; ರಾಗ=ಪ್ರೀತಿ; ಮುನಿವರರನ್+ಅಲ್ಲಿ; ಸರಾಗ=ಸಲೀಸು; ಸಂರಕ್ಷಕ=ಕಾಪಾಡುವವನು; ಅನಿಬರು=ಅವರೆಲ್ಲರು;

ವೀಳೆಯವ+ಇತ್ತನು; ವೀಳೆಯ=ಗುರುಹಿರಿಯರಿಗೆ ಒಲವು ನಲಿವಿನ ಸಂಕೇತವಾಗಿ ನೀಡುವ ಹಣ್ಣುಕಾಯಿಹೂವು ಎಲೆ ಅಡಿಕೆಯಿಂದ ಕೂಡಿರುವ ತಾಂಬೂಲ; ಇತ್ತನು=ನೀಡಿದನು;

ರಾಮಧಾನ್ಯ ಪ್ರಸಂಗ ಓದು

ಪದ ವಿಂಗಡಣೆ ಮತ್ತು ಪದಗಳ ತಿರುಳು

ನೋಟ-೨

ಅಯೋಧ್ಯೆಯಲ್ಲಿ ರಾಜನಾಗಿ ಆಳುತ್ತಿದ್ದ ರಾಮನು ಆರೇಳು ತಿಂಗಳ ನಂತರ ತನ್ನ ಒಡ್ಡೋಲಗಕ್ಕೆ ವ್ರಿಹಿಗ ಮತ್ತು ನರೆದಲೆಗನನ್ನು ಮುನಿಗಳ ಮೂಲಕ ಕರೆತರಿಸಿದಾಗ, ಕಣಜದಲ್ಲಿಟ್ಟಿದ ವ್ರಿಹಿಗನು ಕುಗ್ಗಿ ಕೊರಗಿದ್ದನು. (ಏಕೆಂದರೆ ವ್ರಿಹಿಗ ಅಂದರೆ ಧಾನ್ಯವಾದ ಬತ್ತವನ್ನು ಆ ರೀತಿ ಕಣಜದಲ್ಲಿ ಅನೇಕ ತಿಂಗಳುಗಳ ಕಾಲ ಇಟ್ಟಾಗ, ಅದು ಮುಗ್ಗುಹಿಡಿದು ಹಾಳಾಗುತ್ತದೆ.)

ಆದರೆ ನರೆದಲೆಗನು ಗಟ್ಟಿಮುಟ್ಟಾಗಿಯೇ ಇದ್ದನು.

(ಏಕೆಂದರೆ ನರೆದಲೆಗನು ಎಂದರೆ ಧಾನ್ಯವಾದ ರಾಗಿಯನ್ನು ಕಣಜದಲ್ಲಿ ಅನೇಕ ತಿಂಗಳುಗಳ ಕಾಲ ಇಟ್ಟಾಗ, ಅದು ಮುಗ್ಗುಹಿಡಿದು ಹಾಳಾಗುವುದಿಲ್ಲ.)

ನರೆದಲೆಗನ ಈ ಕಸುವನ್ನು ಮತ್ತು ಬಡವರ ಹಸಿವನ್ನು ನೀಗಿಸುವ ಗುಣವನ್ನು ಮೆಚ್ಚಿಕೊಂಡ ರಾಮನು ನರೆದಲೆಗನಿಗೆ **'ರಾಘವ'** ಎಂಬ ತನ್ನ ಹೆಸರನ್ನೇ ನೀಡಿ ಮನ್ನಣೆ ನೀಡುತ್ತಾನೆ. ಇದರಿಂದ ಅಪಮಾನಗೊಂಡು ಕಂಗೆಟ್ಟಿದ್ದ ವ್ರಿಹಿಗನನ್ನು ರಾಮನು ಕರುಣೆಯಿಂದ ಕಂಡು, ಅವನ ಸಂಕಟವನ್ನು ಪರಿಹರಿಸಿ, ಅವನನ್ನೂ ಹೊಗಳಿ ಹುರುದುಂಬಿಸುತ್ತ, ಜನರಿಗೆ ಬೇಕಾದವರಾಗಿ ನೀವಿಬ್ಬರೂ ಜತೆಗೂಡಿ ಬಾಳಿ ಎಂದು ಹರಸುತ್ತಾನೆ.

ರಘುವರ=ರಾಮ; ಓಲಗ=ಸಭೆ; ನೃಪ=ರಾಜ; ನಿಜ=ತನ್ನ; ಬಾಂಧವ=ನೆಂಟ/ಆಪ್ತ; ಜಾಲ=ಒಬ್ಬರು ಮತ್ತೊಬ್ಬರೊಡನೆ ಹೊಂದಿರುವ ನಂಟು; ವರ್ಗ=ಸಮೂಹ/ಗುಂಪು; ಪರಿತೋಷ=ಅಪಾರವಾದ ಆನಂದ; ಸವೆ=ಮುಗಿ/ತೀರು; ಅನಿಲ=ವಾಯು; ಅನಿಲಸುತ=ವಾಯುಪುತ್ರನಾದ ಹನುಮಂತ;

ಹೈ=ಗುರು ಹಿರಿಯರು ಒಡೆಯರು ಆಡಿದ ಮಾತಿಗೆ ವಿನಯದಿಂದ ಒಪ್ಪಿಗೆಯನ್ನು ಸೂಚಿಸುವಾಗ ಆಡುವ ನುಡಿ; ಹಸಾದ=ಅನುಗ್ರಹ/ದಯೆ/ಹಿರಿಯರ ಮಾತಿಗೆ ಒಪ್ಪಿಗೆಯನ್ನು ಸೂಚಿಸುವ ಪದ; ವಂದಿಸು=ನಮಸ್ಕರಿಸು;

ನಿರ್ವಾಹ=ನಿರ್ವಹಿಸುವುದು/ಮಾಡುವುದು; ಬಾಹುಬಲ=ದೇಹದ ಕಸವು ; ಅಗ್ಗಳಿಕೆ=ಹೆಚ್ಚುಗಾರಿಕೆ ; ಮಿಗು=ಹೆಚ್ಚಾಗಲು ;

ಪಥ+ಪಿಡಿದು; ಪಥ=ದಾರಿ/ಹಾದಿ; ವಜ್ರ=ನವರತ್ನಗಳಲ್ಲಿ ಒಂದು; ದೇಹ=ಶರೀರ; ವಜ್ರದ ದೇಹ=ಇದೊಂದು ನುಡಿಗಟ್ಟು, ಗಟ್ಟಿಮುಟ್ಟಾದ ದೇಹ ಎಂಬ ತಿರುಳನಲ್ಲಿ ಬಳಕೆಯಾಗಿದೆ;

ಸಾಹಸ=ಪ್ರಾಣಾಪಾಯವನ್ನು ಲೆಕ್ಕಿಸದೆ ಮಾಡುವ ಕೆಲಸ; ಏನ್+ಎಂಬೆ; ಎಂಬೆ=ಹೇಳಲಿ; ಪವನ=ವಾಯು; ಸುತ=ಮಗ; ಪವನಸುತ=ವಾಯುಪುತ್ರ/ ಹನುಮಂತ; ಬಿನ್ನೈಸು=ಅರಿಕೆಮಾಡಿಕೊಂಡನು; ರಾಘವ=ರಾಮ; ಅವಧಿ=ಕಾಲದ ಗಡುವು; ಇರ್ದ+ಅವರನು; ಇರ್ದವರನು=ಇರುವ ಅವರನ್ನು; ಒಡಗೊಂಡು=ಜತೆಗೂಡಿ; ಅವನಿ+ಪ: ಅವನಿ=ಭೂಮಿ; ಪ=ಪಾಲಿಸುವವನು;

ಅವನಿಪ=ರಾಜ/ದೊರೆ; ಸಂಮುಖ=ಮುಂದುಗಡೆ/ಎದುರು; ಚಿತ್ತೈಸು=ಆಗಮಿಸು; ಬನ=ಕಾಡು; ಘನ=ದೊಡ್ಡದು; ತಪೋಬಲ=ತಪಸ್ಸಿನ ಕಸುವು; ಮಹಿಮ=ಹಿರಿಮೆಯುಳ್ಳವನು; ಪ್ರತಿವಾದಿಗಳು=ವಾದದಲ್ಲಿ ಎದುರಾಳಿಗಳಾಗಿರುವ ಇಬ್ಬರು; ಒಡಗೊಂಡು=ಜತೆಗೂಡಿ; ಅನುಪಮಿತ=ಹೋಲಿಸಲಾಗದ/ಎಣೆಯಿಲ್ಲದ; ನಿಲಯ=ಮನೆ; ಗುಣನಿಲಯ=ಒಳ್ಳೆಯ ನಡೆನುಡಿಯುಳ್ಳವನು; ಅತುಳ=ಎಣೆಯಿಲ್ಲದ/ಅತಿ ಹೆಚ್ಚಿನ ;ವೃಂದ=ಸಮೂಹ/ಗುಂಪು;

ಬಿಜಯಂಗೈಸೆ=ಬರಲು/ಆಗಮಿಸಲು; ಸತ್ಕರಿಸಿ=ಉಪಚರಿಸಿ; ವ್ಯವಹಾರ=ಜಗಳ/ಕಲಹ/ವ್ಯಾಜ್ಯ; ಪರಿಹರಿಸು=ಬಗೆಹರಿಸು/ತೀರ್ಮಾನಿಸು; ರವಿಕುಲಾನ್ವಯ=ರವಿವಂಶಕ್ಕೆ ಸೇರಿದ; ತ್ರೈಭುವನ=ಮೂರು ಲೋಕಗಳು; ಕರ್ತರು=ನಿರ್ಮಿಸಿದವರು; ಧಾಮ=ಮನೆ; ಅಯೋಧ್ಯಾಪುರಪತಿಧಾಮ =ಅಯೋಧ್ಯೆಯ ರಾಜನ ಅರಮನೆ;

ವಸುಗಳು, ಭುಜಂಗರು, ಅಮರರು, ಕಿನ್ನರರು, ಯಕ್ಷರು, ಗುಹ್ಯಕರು, ವಿದ್ಯಾಧರರು–ಇವರೆಲ್ಲರೂ ಪ್ರಾಚೀನ ಇಂಡಿಯಾದ ಕಾಡುಬೆಟ್ಟಗುಡ್ಡಗಳಲ್ಲಿ ನೆಲೆಸಿದ್ದ ಬುಡಕಟ್ಟುಗಳ ಜನಸಮುದಾಯದವರು; ಭುಜಂಗ+ಅಮರರು; ಅಮರರು=ದೇವತೆಗಳು;

ಭುಜಂಗ=ಹಾವು/ಸರ್ಪ. ಹಾವನ್ನು ತಮ್ಮ ಬುಡಕಟ್ಟಿನ ದೇವರನ್ನಾಗಿ ಪೂಜಿಸುತ್ತಿದ್ದವರೇ ಭುಜಂಗರು;

ಶಶಿ=ಚಂದ್ರ; ರವಿ=ಸೂರ್ಯ; ಆದಿತ್ಯ=ಸೂರ್ಯ; ವಸುಧೆ=ಭೂಮಿ; ವಸುಧೆಯಮರರು=ಬ್ರಾಹ್ಮಣರು; ಚತುರ್ಥರು=ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣದ ಜನಸಮುದಾಯದವರು; ವಿದ್ಯಾಧಿಕರು=ವಿದ್ಯೆಯಲ್ಲಿ ಪಾಂಡಿತ್ಯವನ್ನು ಪಡೆದವರು; ನೆರೆ=ಸೇರು/ಕೂಡು; ಇಂತು+ಎಸೆವ; ಎಸೆ=ಕಂಗೊಳಿಸು; ಮತಿವಂತ=ತಿಳುವಳಿಕೆಯುಳ್ಳವನು/ವಿವೇಕವುಳ್ಳವನು; ಸಂತತಿ=ವಂಶ/ಗುಂಪು/ಸಮೂಹ; ಧರಣೀಕಾಂತ=ಭೂಮಂಡಲದ ಒಡೆಯನಾದ ರಾಜ; ಸುಬುದ್ಧಿ=ಒಳ್ಳೆಯ ತಿಳುವಳಿಕೆ; ಎಂತು=ಹೇಗೆ ; ಅರುಹುವಿರಿ=ತಿಳಿಸುವಿರಿ;

ತಪೋಮಹಿಮರು=ತಪಸ್ಸನ್ನು ಮಾಡಿ ಒಳ್ಳೆಯ ಅರಿವನ್ನು ಪಡೆದವರು; ವಂಚಿಸಲು+ಆಗದು; ವಂಚಿಸು=ಮರೆಮಾಚುವುದು/ನುಣಿಚಿಕೊಳ್ಳುವುದು; ಧರ್ಮ=ವಾಸ್ತವ/ದಿಟ/ನಿಜ; ಅನುನಯ=ಯಾರ ಮನಸ್ಸನ್ನು ನೋಯಿಸದಂತಹ ರೀತಿಯಲ್ಲಿ ಬಹಳ ಒಳ್ಳೆಯ ನಡೆನುಡಿಯಿಂದ ವರ್ತಿಸುವುದು; ಅನಿಮಿಷರು=ದೇವತೆಗಳು; ಈಕ್ಷಿಸು=ನೋಡು;

ಭಾರ್ಗವ=ಬಿಲ್ಲುಗಾರ/ಪರಶುರಾಮ; ಭಾರ್ಗವ ರಾಮ=ಬಿಲ್ ವಿದ್ಯೆಯಲ್ಲಿ ಪರಿಣತನಾದ ರಾಮ/ಪರಶುರಾಮನನ್ನು ಸೋಲಿಸಿದ ರಾಮ ; ಮೀರಿಸು=ಹೆಚ್ಚಾಗು; ಗುಣಸಾರನ್+ಆವನು; ಗುಣಸಾರ=ಒಳ್ಳೆಯ ಕಸುವು/ಶಕ್ತಿ; ಆವನು=ಯಾವನು; ಜಂಭಾರಿ=ದೇವೇಂದ್ರ; ಸಾರಹೃದಯ=ಕರುಣೆಯಿಂದ ಕೂಡಿದ ಮನಸ್ಸು; ನಿಸ್ಸಾರ=ಕರುಣೆಯಿಲ್ಲದ ಮನಸ್ಸು; ನಿಧಿ=ಸಂಪತ್ತು/ಸಮುದ್ರ; ಗುಣನಿಧಿ=ಒಳ್ಳೆಯ ನಡೆನುಡಿಯುಳ್ಳವನು; ಮಾರುತ+ಆತ್ಮಜ; ಮಾರುತ=ವಾಯುದೇವ; ಆತ್ಮಜ=ಮಗ; ಸನ್ನೆ=ಗುರುತು/ಸಂಕೇತ; ನಾರದ=ಒಬ್ಬ ದೇವತೆ; ಸುರಪ=ದೇವೇಂದ್ರ; ನಿಶ್ಚಯ+ಅಹುದು; ನಿಶ್ಚಯ=ದಿಟ/ನಿಜ; ಸಮರ್ಥ=ಬಲಶಾಲಿ/ಗಟ್ಟಿಗ; ಬಲಯುತ=ಕಸುವಿನಿಂದ ಕೂಡಿದವನು; ಕಾಂತಿ+ಕೆಡಲಿಲ್ಲ;

ಕಾಂತಿ=ಚೆಲುವು/ತೇಜಸ್ಸು/ಕಳೆ; ಸಹಜ+ಇದು; ಸಹಜ=ದಿಟ/ವಾಸ್ತವ/ನಿಜ; ಪರಪಕ್ಷ+ಆದಡೆ; ಪರ=ಇತರ/ಬೇರೆಯ; ಪಕ್ಷ=ಪಂಗಡ/ಗುಂಪು; ಪರಪಕ್ಷ=ಎದುರು ಪಂಗಡ; ಆದಡೆ=ಆದರೆ;

ಕರಗು=ಗಟ್ಟಿಯಾಗಿದ್ದುದು ದ್ರವರೂಪವನ್ನು ತಳೆಯುವುದು. ಇದೊಂದು ರೂಪಕವಾಗಿದೆ. ವ್ರಿಹಿಯ ಆಕಾರವು ಗಾತ್ರದಲ್ಲಿ ಕುಗ್ಗಿದೆ; ಕಂದು=ಕಳೆಗುಂದು/ಬಣ್ಣಗೆಡು/ಆರು ತಿಂಗಳ ಕಾಲ ಸೆರೆಯಲ್ಲಿದ್ದುದರಿಂದ ವ್ರಿಹಿ ಮುಗ್ಗು ಹಿಡಿದು ಕಳೆಗುಂದಿದ್ದಾನೆ;

ವಿಹಿತ+ಅದು; ವಿಹಿತ=ಹೊಂದಿಸಿದ/ಕೂಡಿಸಿದ/ಯೋಗ್ಯವಾದ/ಸೂಕ್ತವಾದ; ಬಲ್ಲಿದ=ಗಟ್ಟಿಗ/ಬಲಶಾಲಿ; ಹುಸಿ+ಅಲ್ಲ; ಹುಸಿ=ಸುಳ್ಳು;

ಬಡವರು=ಜೀವನಕ್ಕೆ ಅಗತ್ಯವಾದ ಪ್ರಮಾಣದಲ್ಲಿ ಉಣಲು ಅನ್ನ, ತೊಡಲು ಬಟ್ಟೆ, ವಾಸಿಸಲು ವಸತಿಯಿಲ್ಲದೆ ಸಂಕಟಕ್ಕೆ ಒಳಗಾದವರು;

ಬಲ್ಲಿದರು=ಜೀವನದಲ್ಲಿ ಅಗತ್ಯಕ್ಕಿಂತಲೂ ಹೆಚ್ಚಾಗಿ ಅನ್ನ ಬಟ್ಟೆ ವಸತಿಯನ್ನು ಪಡೆದು ವಿದ್ಯೆ, ಸಂಪತ್ತು, ಮತ್ತು ಆಡಳಿತದ ಗದ್ದುಗೆಯಲ್ಲಿರುವವರು;

ಆರೈದು=ವಿಚಾರಿಸಿ/ಚಿಂತಿಸಿ/ಗಮನಿಸಿ; ಸಲಹುವನು=ಕಾಪಾಡುತ್ತಾನೆ; ಇವಗೆ=ಇವನಿಗೆ/ಈ ನರೆದಲೆಗನಿಗೆ; ಸರಿ+ಉಂಟೆ; ಸರಿ=ಸಮಾನ/ಸಾಟಿ; ಉಂಟೆ=ಇರಲಾಗುವುದೇ; ಭಾಗ್ಯ=ಸಿರಿವಂತಿಕೆ; ನಾಮ=ಹೆಸರು; ನಾಮವ ಕರೆದು=ತನ್ನ ಹೆಸರನ್ನು ಉಚ್ಚರಿಸುತ್ತ;

ಧರೆ=ಭೂಮಿ; ರಾಘವನ್+ಎಂಬ; ರಾಘವ=ರಾಮ; ಪೆಸರ್+ಆಯ್ತು; ಪೆಸರ್=ಹೆಸರು;

ನರೆದಲೆಗ ನೀ ಬಾರ ಎನುತ ರಾಮನೃಪಾಲ ನೆರೆ ಮೆಚ್ಚಿ ಕರೆದುಕೊಟ್ಟನು ತನ್ನ ನಾಮವ ಧರೆಗೆ ರಾಘವನೆಂಬ ಪೆಸರಾಯ್ತು=ನರೆದಲೆಗನನ್ನು ರಾಮನು ತನ್ನ ಹತ್ತಿರಕ್ಕೆ ಕರೆದುಕೊಂಡು, ತನ್ನ ಮೆಚ್ಚುಗೆಯ ಸೂಚಕವಾಗಿ ತನ್ನ ಹೆಸರನ್ನೇ ನರೆದಲೆಗನಿಗೆ ಇಡುತ್ತಾನೆ. ಅಂದಿನಿಂದ ನರೆದಲೆಗನ ಹೆಸರನ್ನು ಇಡೀ ಭೂಮಂಡಲದಲ್ಲಿ 'ರಾಗಿ' ಎಂಬ ಹೆಸರಿನಿಂದ ಕರೆಯಲಾಗುತ್ತದೆ. 'ರಾಘವ' ಎಂಬ ಪದ ಜನರ ಉಚ್ಚಾರಣೆಯಲ್ಲಿ 'ರಾಗಿ' ಎಂದಾಗಿದೆ ಎಂಬುದು ಜನಮನದ ಕಲ್ಪನೆಯಾಗಿದೆ;

ಶಿರ=ತಲೆ; ಇರದೆ=ದಿಕ್ಕು ತೋಚದಂತಾಗಿ; ಬಾಗಿಸು=ಬಗ್ಗಿಸು; ಚರಣ=ಪಾದ; ಸಿರಿಚರಣ=ಮಂಗಳವನ್ನುಂಟುಮಾಡುವ ಪಾದ. ಇದೊಂದು ನುಡಿಗಟ್ಟು. ದೇವತೆಗಳು ಹಾಗೂ ಗುರುಹಿರಿಯರ ಮಹಿಮೆಯನ್ನು ಸೂಚಿಸಲು ಅವರ ಪಾದಗಳನ್ನು ಈ ರೀತಿ ಹಾಡಿಹೊಗಳುತ್ತಾರೆ; ಅಭಿನಮಿಸು=ನಮಸ್ಕರಿಸು/ವಂದಿಸು; ಮಾನಭಂಗ=ಅವಮಾನ; ಎಂತು=ಯಾವ ರೀತಿ; ಕಡುನೊಂದು=ಬಹಳ ಸಂಕಟಪಡುತ್ತ; ತಲೆ+ಕುತ್ತು; ಕುತ್ತು=ಬಗ್ಗಿಸು/ಬಾಗು; ತಲೆಗುತ್ತು=ತಲೆತಗ್ಗಿಸಿ; ಪರಿತಾಪ=ಅತಿಯಾದ ಸಂಕಟ; ಲಕ್ಷ್ಮೀಕಾಂತ=ಲಕ್ಷ್ಮಿಯ ಗಂಡನಾದ ವಿಷ್ಣು; ಎನುತಲ್+ಇರೆ; ಭೂಕಾಂತ=ರಾಜ; ಲಾಲಿಸು=ಅಕ್ಕರೆಯನ್ನು ತೋರು;

ಮರುಳ=ತಿಳಿಗೇಡಿ/ದಡ್ಡ; ಮರುಳೆ=ತಿಳಿಗೇಡಿಯೇ; ಅತಿಶಯ=ಹೆಚ್ಚಿನ; ಕನಲು=ಕೋಪ; ಧರೆ=ಭೂಮಿ; ಹೊದ್ದು=ತಟ್ಟು/ಬಡಿ/ಹೊಡೆ;

ಕ್ಷಾಮ+ಕಾಲ; ಕ್ಷಾಮ=ಮಳೆಬೆಳೆಯಿಲ್ಲದೆ ಅನ್ನಕ್ಕೆ ಹಾಹಾಕಾರವುಂಟಾಗಿ ಜೀವಿಗಳ ನರಳುವುದು; ಹೊರೆ=ಕಾಪಾಡು; ದೀನರು=ಬಡವರು; ದಾರಿದ್ರ=ಬಡತವು; ಎಂದೆವು+ಅಲ್ಲದೆ; ಹೀನ+ಕಳೆದವರು+ಅಲ್ಲ; ಮಾನುಷ=ಮನುಜ;

ನಮ್ಮ+ಎಡೆಗೆ; ಸುರಧೇನು=ದೇವೇಂದ್ರನ ಅಮರಾವತಿಯಲ್ಲಿರುವ ಹಸುವಿನ ಹೆಸರು. ವ್ಯಕ್ತಿಗಳ ಬಯಕೆಗಳೆಲ್ಲವನ್ನೂ ಈ ಹಸು ಈಡೇರಿಸುತ್ತದೆಯೆಂಬ ಕಲ್ಪನೆಯು ಜನಸಮುದಾಯದ ಮನದಲ್ಲಿದೆ;

ಮಾನುಷನು ನೀ ನಮ್ಮೆಡೆಗೆ ಸುರಧೇನುವಿಗೆ ಸಮ=ಲೋಕದ ಕಣ್ಣಿನಲ್ಲಿ ಸಾಮಾನ್ಯನಾಗಿರುವ ನೀನು, ನಮ್ಮ ದೃಷ್ಟಿಯಲ್ಲಿ ಕಾಮಧೇನುವಿಗೆ ಸಮ. ಅಪಮಾನದಿಂದ ಕುಗ್ಗಿರುವ ವ್ರಿಹಿಗನನ್ನು ಸಮಾಧಾನಪಡಿಸಲೆಂದು ಈ ರೀತಿ ರಾಮನು ಹೊಗಳುತ್ತಿದ್ದಾನೆ;

ಚಿತ್ತ=ಮನಸ್ಸು; ಪರಮಾನ್ನ=ಉತ್ತಮವಾದ ಅನ್ನ;

ಮನುಜ+ಆವಳಿ; ಮನುಜ=ಮಾನವ; ಆವಳಿ=ಗುಂಪು; ಮನುಜಾವಳಿ= ಮಾನವ ಸಮುದಾಯ; ಪಕ್ವ+ಅನ್ನ; ಪಕ್ವ=ಬೆಂದಿರುವ/ಬೇಯಿಸಿದ; ಪಕ್ವಾನ್ನ=ಈ ಪದ ಒಂದು ನುಡಿಗಟ್ಟಾಗಿ ಬಳಕೆಯಾಗಿದೆ.

ಎಲ್ಲ ಜೀವಿಗಳಿಗೂ ಅತ್ಯಗತ್ಯವಾದ ಆಹಾರ ಎಂಬ ತಿರುಳಿನಲ್ಲಿ ಬಳಕೆಯಾಗಿದೆ;

ನೀ ದೇವರಿಗೆ ಪರಮಾನ್ನ=ನೀನು ದೇವರಿಗೆ ನೈವೇದ್ಯವಾಗಿ ಅರ್ಪಣೆಗೊಳ್ಳುವ ಉಣಿಸಾಗುವೆ;

ಈತನು ಮನುಜಾವಳಿಗೆ ಪಕ್ವಾನ್ನ=ರಾಗಿಯು ಇಡೀ ಮಾನವ ಸಮುದಾಯದ ಹಸಿವನ್ನು ತಣಿಸಬಲ್ಲ ಉಣಿಸಾಗುತ್ತದೆ;

ನೀವು ಧರೆಯೊಳಗೆ ಅತಿ ಹಿತದಲ್ಲಿ ಇಹುದು=ನೀವಿಬ್ಬರು ಲೋಕದಲ್ಲಿ ಪರಸ್ಪರ ಒಲವು ಮತ್ತು ಒತ್ತಾಸೆಯಿಂದ ಜೊತೆಗೂಡಿ ಬಾಳುವುದು;

ವರ=ಅನುಗ್ರಹ; ಆವ=ಯಾವ; ಆವ ಕಾಲದಲಿ=ಎಲ್ಲಾ ಕಾಲದಲ್ಲಿಯೂ; ಸಲ್ಲು=ಒಪ್ಪು; ಪಾವನ=ಪವಿತ್ರ;

ನಾವು ವರವ ಕೊಟ್ಟೆವು. ಆವ ಕಾಲದಲಿ ಸಲ್ಲುವುದು. ಇನ್ನು ನೀವೆ ಪರಮಸುಖಿ ಪಾವನರು="ಎಲ್ಲಾ ಕಾಲದಲ್ಲಿಯೂ ನೀವು ಜನಸಮುದಾಯಕ್ಕೆ ಬೇಕಾದವರಾಗಿ ಬಾಳುವಂತಾಗಲಿ ಮತ್ತು ಜನಸಮುದಾಯಕ್ಕೆ ನಿಮ್ಮಿಂದ ಆನಂದ ಹಾಗೂ ನೆಮ್ಮದಿಯು ದೊರೆಯುವಂತಾಗಲಿ ಎಂಬ ವರವನ್ನು ನಿಮ್ಮಿಬ್ಬರಿಗೂ ನೀಡಿದ್ದೇನೆ. ನಿಮ್ಮಿಬ್ಬರಿಂದ ಜನರ ಜೀವನ ಪಾವನವಾಗುತ್ತದೆ." ಅಂದರೆ ಜನಸಮುದಾಯ ಉಳಿದು ಬೆಳೆದು ಬಾಳುತ್ತದೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ.

□□

ಕನಕದಾಸರ ರಾಮಧಾನ್ಯ ಚರಿತ್ರೆ

ಸಂಪಾದಕರು: ಡಾ. ದೇ. ಜವರೇಗೌಡ
ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು
ಮೂರನೆಯ ಮುದ್ರಣ: ೨೦೧೭

ಈ ಮೇಲ್ಕಂಡ ಪುಸ್ತಕದಿಂದ ರಾಮಧಾನ್ಯ ಪ್ರಸಂಗ ಓದಿಗೆ ಪದ್ಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ನೋಟ–೧

ಧರಣಿಸುತೆಯನು ಕರೆಸಿ ದೇವಾ
ಸುರರುಲಿಯಲು ವಿಭೀಷಣಗೆ ವಿ
ಸ್ತರಿಸಿ ಪೇಳಿದ ಪುರಕೆ ಪಯಣವ ಮಾಡು ನೀನೆನಲು
ಕರೆಸಿದನು ನಿಜ ಮಂತ್ರಿ ಕರಿ ರಥ
ತುರಗ ಪಾಯ್ದಳವಾಕ್ಷಣವೆ
ನೆರೆದುದಗಣಿತ ವೀರದಾನವ ಸೇನೆ ನಿಮಿಷದಲಿ. ಪದ್ಯ–೧೬

ಹರುಷದಲಿ ತರಿಸಿದ ಕುಬೇರನ
ವರ ರಥವ ಮೇಳೈಸಿ ದೇವರ
ಸಿರಿಪದಾಂಬುಜಕರ್ಪಿಸಲು ಶ್ರೀರಾಮ ನಸುನಗುತ
ಕರೆಸಿ ಲಕ್ಷ್ಮಣ ದೇವನನು ನಿಜ
ತರುಣಿ ಸಹಿತೇರಿದ ವರೂಥವ
ತರಣಿಸುತ ಹನುಮಂತ ಜಾಂಬವರೈದಿತೊಗ್ಗಿನಲಿ. ೧೭

ಅಂಗದನು ನಳನೀಲ ಶತಬಲಿ
ತುಂಗ ವಿಕ್ರಮ ಸುಷೇಣನಾ ಪ್ಲ
ವಂಗ ಗವಯ ಗವಾಕ್ಷ ಮೊದಲಾದಖಿಳ ವಾನರರು
ಸಂಗಡಿಸಿ ನೆರೆದುದು ಮಹಾಸಮ
ರಂಗವೀರರು ಮೋಹಿಸಿದ ರಘು
ಪುಂಗವನ ರಥದೊಡನೆ ನಡೆದುದು ಮುಂದೆ ಸಂದಣಿಸಿ. ೧೮

ಧಾರುಣೀಪತಿ ಕೇಳು ಲಂಕೆಯ
ವೀರದಾನವ ಭಟರು ಪುರಜನ
ಪೌರಜನ ಸಹಿತಾ ವಿಭೀಷಣನೊಡನೆ ಮೇಳೈಸಿ
ಭೂರಿಬಲವೈತರುತಲಿರೆ ರಣ
ಭೇರಿ ದಂಧಣಧಣರೆನಲು ಮಿಗೆ
ಚೀರಿದವು ಕಹಳೆಗಳು ದಿಕ್ಪಾಲಕರ ಬೆದರಿಸಿತು. ೧೯

ತಡೆಯದ್ಯೆತಂದುಭಯಬಲ ಸಂ
ಗಡಿಸಿ ಬರುತಿರೆ ಮುಂದೆ ಸೇತುವ
ಮಡದಿಗೆಲ್ಲವ ತೋರಿಸುತ ನೆರೆ ಕಡಲ ದಾಂಟಿದರು
ನಡೆದು ರಾಮೇಶ್ವರದ ಬಳಿಯಲಿ
ಮೃಡನ ಪೂಜಿಸಿ ಭಕ್ತಿಭಾವದ
ಸಡಗರದಿ ವಾಲ್ಮೀಕಿಯಾಶ್ರಮಕೈದಿದನು ನೃಪತಿ. ೨೦

ಅಲ್ಲಿ ನೆರೆದ ಮಹಾಮುನೀಶ್ವರ
ರೆಲ್ಲರನು ಸತ್ಕರಿಸಿ ಜಾನಕಿ
ವಲ್ಲಭನು ನಡೆತಂದನಾ ಮುಚುಕುಂದನಾಶ್ರಮಕೆ
ಸಡಿಲದುನ್ನತ ಬಲಸಮೇತದಿ
ಕಡಲ ಕಂಡನು ಪಂಚನಂದಿಯೊಳ್
ಬಿಡದೆ ಪಲ್ಲೈಸಿರುವ ಫಲ ವಸ್ತುಗಳ ಸಂಭ್ರಮದಿ. ೨೧

ಆ ಮಹಾವನದೊಳಗೆ ಸುಭಟ
ಸ್ತೋಮವಿಳಿದುದು ಪಾಳೆಯದ ಸಂ
ಗ್ರಾಮದಿದಿರಲಿ ಗುಡಿಗುಡಾರಂಗಳು ವಿರಾಜಿಸಿತು
ರಾಮಣೀಯಕ ರಚನೆಯಲಿ ಸು
ತ್ರಾಮನೋಲಗದಂತೆ ರಘುಕುಲ
ರಾಮನೈದಿರೆ ಬಂದು ಕಂಡರು ಸಕಲ ಮುನಿವರರು. ೨೨

ಕೌಶಿಕನು ಜಮದಗ್ನಿ ಜನ್ಹು ಪ
ರಾಶರನು ಜಾಬಾಲಿ ಭೃಗು ದೂ
ರ್ವಾಸ ಗೌತಮನಾದಿಯಾದ ಸಮಸ್ತ ಮುನಿವರರು
ಭಾಸುರದ ತೇಜದಲಿ ತಮ್ಮ ನಿ
ವೇಶನವ ಹೊರವಂಟು ಬಂದರು
ದಾಶರಥಿಯನು ಕಂಡು ಹರಸಿದರಕ್ಷತೆಯ ತಳಿದು. ೨೩

ರಾಮ ದಶರಥತನಯ ರಘುಕುಲ
ಸೋಮ ಸನ್ನುತ ಸನಾಮನಾಹವ
ಭೀಮ ಸುಜನ ಪ್ರೇಮ ಜಗದಭಿರಾಮ ನಿಸ್ಸೀಮ
ತಾಮರಸದಳ ನಯನ ದೇವ
ಪ್ರೇಮ ಸುರಕುಲ ಮೌಳಿವಂದಿತ
ಪ್ರೇಮದಿಂದಲಿ ಪಾಲಿಸೆನ್ನುತಲವರು ಪೊಗಳಿದರು. ೨೪

ದೇವಿ ಜಾನಕಿ ಸಹಿತ ವನದಲಿ
ನೀವು ಕಷ್ಟವ ಬಳಸಿ ಭಕ್ತರ
ಕಾವ ಹದನನು ನೆನೆದು ವಾನರ ಬಲಸಮೇತದಲಿ
ರಾವಣನ ಸಂಹರಿಸಿ ಲಂಕೆಯ
ನಾ ವಿಭೀಷಣಗಿತ್ತು ನಮ್ಮನು
ದೇವ ಪಾಲಿಸೆ ಬಂದೆಯೆಂದುಪಚರಿಸಿದರು ನೃಪನ. ೨೫

ಸಾರಹೃದಯರು ನೀವು ನಮಗುಪ
ಚಾರವೇಕಿದು ನಿಮ್ಮಡಿಯ ಕರು
ಣಾರಸವೆ ಸಲಹುವುದು ನಮ್ಮನು ಸಾಕದಂತಿರಲಿ
ಆರಿಗುಂಟಿದು ನಿಮ್ಮ ದರುಶನ
ಸೇರಿತೆಮಗಿಂದಿನಲಿಯೆಂದುಪ
ಚಾರದಿಂ ಸತ್ಕರಿಸಿ ಕುಳ್ಳಿರಿಸಿದನು ಮುನಿವರರ. ೨೬

ಎಡದ ಕಡೆಯಲಿ ಕಪಿಕುಲೇಂದ್ರನ
ಗಡಣ ಬಲದಲಿ ರಾವಣಾನುಜ
ಸಡಗರದಿ ಮುನಿನಿಕರವಿದಿರಲಿ ಹಿಂದೆ ವಾನರರು
ಮಡದಿ ಲಕ್ಷ್ಮಣದೇವರಿರ್ವರು
ಬಿಡದೆ ಚಿಮ್ಮಲು ಚಾಮರಂಗಳ
ಪೊಡವಿಪತಿ ಶ್ರೀರಾಮ ಸಿಂಹಾಸನದಿ ರಂಜಿಸಿದ. ೨೭

ಅಲ್ಲಿ ನೆರೆದ ಮಹಾಮುನೀಶ್ವರ
ರೆಲ್ಲ ತರಿಸಿದರಖಿಳ ವಸ್ತುವ
ಬೆಲ್ಲ ಸಕ್ಕರೆ ಜೇನುತುಪ್ಪ ರಸಾಯನಂಗಳಲಿ
ಭುಲ್ಲವಿಸಿ ರಚಿಸಿದ ಸುಭಕ್ಷಗ
ಳೆಲ್ಲವನು ತುಂಬಿದರು ಹೆಡಗೆಗ
ಳಲ್ಲಿ ಜೋಡಿಸಿ ಹೊರಿಸಿ ತಂದರು ರಾಮನೋಲಗಕೆ. ೨೮

ತಂದು ಶಿಷ್ಯರು ಭಕ್ಷಗಳ ಮುದ
ದಿಂದ ಸುರಿಯಲು ನೋಡಿ ನಸುನಗೆ
ಯಿಂದ ರಘುಕುಲಸಾರ್ವಭೌಮನು ಕರಸಿ ನಿಜಬಲಕೆ
ಅಂದು ಕೊಡಿಸಲು ನೋಡಿದರು ರುಚಿ
ಯಿಂದ ಸವಿದರು ಭೋಜ್ಯಗಳನಾ
ನಂದದಲಿ ಕೊಂಡಾಡಿದರು ವಾನರರು ಮುನಿವರರ. ೨೯

ಅನಿಲಸುತ ಬಾರೆಂದು ರಘುನಂ
ದನನು ಕರುಣದೊಳಿವರ ರುಚಿಯೆಂ
ತೆನಲು ಕರಗಳ ಮುಗಿದು ಬಿನ್ನೈಸಿದನು ರಘುಪತಿಗೆ
ಇನಕುಲಾನ್ವಯತಿಲಕ ಚಿತ್ತೈ
ಸೆನಗೆ ಸವಿಯಹುದಿನ್ನು ಧಾನ್ಯದ
ತನುವನೀಕ್ಷಿಸಬೇಕು ದೇವರು ತರಿಸಿ ನೀವೆಂದ. ೩೦

ಎನಲು ರಾಮನೃಪಾಲ ಗೌತಮ
ಮುನಿಯನೀಕ್ಷಿಸಬೇಕು ಸಲೆ ತರಿ
ಸೆನಲು ಧಾನ್ಯವನೊಡನೆಯಾಲೋಚಿಸಿದರೀ ಹದನ
ಮನನಲಿದು ತಂತಮ್ಮ ಶಿಷ್ಯರ
ವಿನಯದಿಂದಲಿ ಕರೆಸಿ ತಾರೆಂ
ದೆನಲು ಮೆರೆದರು ತಳುವದವರನು ತಂದು ಸಭೆಯೊಳಗೆ. ೩೧

ನರೆದಲೆಗನಿದು ನೆಲ್ಲು ಹಾರಕ
ಬರಗು ಜೋಳವು ಕಂಬು ಸಾಮೆಯು
ಉರುತರದ ನವಣೆಯಿದು ನವಧಾನ್ಯವೆಂದೆನಲು
ಮೆರೆವ ರಾಸಿಯ ಕಂಡುಯಿದರೊಳು
ಪರಮಸಾರದ ಹೃದಯನಾರೆಂ
ದರಸಿ ಕೇಳಿದನಲ್ಲಿರುತಿಹ ಮಹಾಮುನೀಶ್ವರರ. ೩೨

ಕೆಲರು ಗೋಧಿಯ ಸಾಮೆಯನು ಕೆಲ
ಕೆಲರು ನವಣೆಯ ಕಂಬು ಜೋಳವ
ಕೆಲರು ಹಾರಕನೆಂದು ಕೆಲವರು ನೆಲ್ಲನತಿಶಯವ
ಕೆಲರು ನರೆದಲೆಗನನು ಪತಿಕರಿ
ಸಲದ ನೋಡಿದ ನೃಪತಿಯದರೊಳು
ಹಲವು ಮತವೇಕೊಂದನೇ ಪೇಳೆಂದ ಗೌತಮನು. ೩೩

ದಾಶರಥಿ ಚಿತ್ತೈಸು ನಮ್ಮಯ
ದೇಶಕತಿಶಯ ನರೆದಲೆಗನೇ
ವಾಸಿಯುಳ್ಳವನೀತ ಮಿಕ್ಕಿನ ಧಾನ್ಯವೇಕೆನಲು
ಲೇಸನಾಡಿದ ಮುನಿಪ ಗೌತಮ
ದೋಷರಹಿತನು ಪಕ್ಷಪಾತವ
ನೀಸು ಪರಿಯಲಿ ಮಾಡುವರೆ ಶಿವಯೆಂದನಾ ವ್ರಿಹಿಗ. ೩೪

ಎಲ್ಲ ಧರ್ಮದ ಸಾರವನು ನೀವ್
ಬಲ್ಲಿರರಿಯದೆಯೆಲ್ಲರನು ನೀ
ವಿಲ್ಲಿ ನುಡಿವಯುಪೇಕ್ಷೆಯುಂಟೇ ಸಾಕದಂತಿರಲಿ
ನೆಲ್ಲು ನಾನಿರೆ ಗೋಧಿ ಮೊದಲಾ
ದೆಲ್ಲ ಧಾನ್ಯಗಳಿರಲುಯಿದರಲಿ
ಬಲ್ಲಿದನು ನರೆದಲೆಗನೆಂಬುದಿದಾವ ಮತವೆಂದ. ೩೫

ಏನೆಲವೊ ನರೆದಲೆಗ ನೀನು ಸ
ಮಾನನೇಯೆನಗಿಲ್ಲಿ ನಮ್ಮನು
ದಾನವಾಂತಕ ಬಲ್ಲನಿಬ್ಬರ ಹೆಚ್ಚು ಕುಂದುಗಳ
ಜಾನಕಿಪತಿಯ ಸನಿಹದಲಿ ಕುಲ
ಹೀನ ನೀನು ಪ್ರತಿಷ್ಠ ಸುಡು ಮತಿ
ಹೀನ ನೀನೆಂದೆನುತ ಖತಿಯಲಿ ಬೈದು ಭಂಗಿಸಿದ. ೩೬

ಲೋಕದಲಧಿಕ ಭೋಜನವಿದೆಂ
ದಾಕೆವಾಳರು ಬುಧರು ಜರೆದು ನಿ
ರಾಕರಿಸಿ ಬಿಡಲಂತು ನೀ ಶೂದ್ರಾನ್ನವಾದೆಯಲ
ನಾಕನಿಳೆಯರು ಸಾಕ್ಷಿ ನಿನ್ನ ವಿ
ವೇಕಿಗಳು ಮೆಚ್ಚುವರೆ ಬಾಹಿರ
ಸಾಕು ನಡೆ ನೀನಾವ ಮಾನ್ಯನು ಕಡೆಗೆ ತೊಲಗೆಂದ. ೩೭

ಕ್ಷಿತಿಯಮರರುಪನಯನದಲಿ ಸು
ವ್ರತ ಸುಭೋಜನ ಪರಮ ಮಂತ್ರಾ
ಕ್ಷತೆಗಳಲಿ ಶುಭಶೋಭನದಲಾರತಿಗೆ ಹಿರಿಯರಲಿ
ಕ್ರತುಗಳೆಡೆಯೊಳಗರಮನೆಯಲಿ
ಪ್ರತಿದಿನವು ರಂಜಿಸುವ ದೇವರಿ
ಗತಿಶಯದ ನೈವೇದ್ಯ ತಾನಹೆನೆಂದನಾ ವ್ರಿಹಿಗ. ೩೮

ಜನಪರಿಗೆ ಶಿಶುಗಳಿಗೆ ಬಾಂಧವ
ಜನರೆಡೆಗೆ ಬ್ರಹ್ಮರ ಸಮಾರಾ
ಧನೆಗೆ ವಿದ್ಯಾರಂಭ ಕಾಲಕೆ ಸಕಲ ಭೂಸುರರ
ಮನೆಗಳಲಿ ಹರಿದಿವಸದೌಪಾ
ಸನೆಗಳಲಿ ತಾ ಯೋಗ್ಯನಹುದೆಂ
ದೆನಿಸಿಕೊಂಬೆನು ನೀನಯೋಗ್ಯನು ಭ್ರಷ್ಟ ತೊಲಗೆಂದ. ೩೯

ಹೊಸಮನೆಯ ಪುಣ್ಯಾರ್ಚನೆಗೆ ಮಿಗೆ
ಯೆಸೆವ ಮದುಮಕ್ಕಳಿಗೆ ಸೇಸೆಗೆ
ವಸುಮತೀಶರ ಗರುಡಿಯಲಿ ಶಸ್ತ್ರಾಸ್ತ್ರದರ್ಚನೆಗೆ
ಎಸೆವ ವಿಪ್ರರ ಥಾಳದಲಿ ರಂ
ಜಿಸುವ ಗಂಧಾಕ್ಷತೆಯಹೆನು ಭಾ
ವಿಸಲು ಲೋಕದೊಳಾರು ಸರಿಯಿಂತೆಂದನಾ ವ್ರಿಹಿಗ. ೪೦

ಧರಣಿಯಮರರು ಮಂತ್ರ ತಂತ್ರೋ
ಚ್ಚರಣೆಯಲಿ ಹಸ್ತಾಂಬುಜದಿ ಮಿಗೆ
ಹರಸಿ ಕೊಡಲಕ್ಷತೆಯ ಮಂಡೆಯೊಳಾಂತ ಮಹಿಮರಿಗೆ
ದುರಿತ ದುಃಖ ವಿನಾಶ ಮಂಗಳ
ಕರವಹುದು ತಾನೀವೆ ಸಂತತ
ಸಿರಿಯ ಸಂಪತ್ತಾಯುವನು ಕೇಳೆಂದನಾ ವ್ರಿಹಿಗ. ೪೧

ಪರಿಮಳದ ಚಂದನದ ತರುವಿಗೆ
ಸರಿಯೆವೊಣಗಿದ ಕಾಷ್ಠ ಗೋವದು
ಕರೆದ ಹಾಲಿಗೆ ಕುರಿಯ ಹಾಲಂತರವೆ ಭಾವಿಸಲು
ಪರಮ ಸಾಹಸಿ ವೀರ ಹನುಮಗೆ
ಮರದ ಮೇಲಣ ಕಪಿಯು ತಾನಂ
ತರವೆ ಘಡ ನೀನೆನಗೆ ಸರಿಯೇ ಭ್ರಷ್ಟ ತೊಲಗೆಂದ. ೪೨

ಸುರನದಿಗೆ ತಾ ಸರಿಯೆ ಕಾಡೊಳು
ಹರಿವ ಹಳ್ಳದ ನೀರು ಗರುಡನ
ಮರಿಗೆ ಹದ್ದಂತರವೆ ಹಂಸಗೆ ಬಕನು ಹೋಲುವುದೆ
ಸರಸ ಮರಿ ಕೋಗಿಲೆಗೆ ವಾಯಸ
ನಣಕಿಸುವ ತೆರನಾಯ್ತು ಸಾಕಿ
ನ್ನರೆದಲೆಗ ನೀನಾವ ಮಾನ್ಯನು ಕಡೆಗೆ ತೊಲಗೆಂದ. ೪೩

ನುಡಿಯ ಕೇಳುತ ಕನಲಿ ಕಂಗಳು
ಕಿಡಿಮಸಗಿ ಖತಿಗೊಂಡು ನುಡಿದನು
ಸಿಡಿಲ ಘರ್ಜನೆಯಂತೆ ಸಭೆಯಲಿ ಜರೆದನಾ ವ್ರಿಹಿಯ
ನುಡಿಗೆ ಹೇಸದ ಭಂಡ ನಿನ್ನೊಳು
ಕೊಡುವರೇ ಮಾರುತ್ತರವ ಕಡು
ಜಡನಲಾ ನಿನ್ನೊಡನೆ ಮಾತೇಕೆಂದು ನರೆದಲೆಗ. ೪೪

ಸತ್ಯಹೀನನು ಬಡವರನು ಕ
ಣ್ಣೆತ್ತಿ ನೋಡೆ ಧನಾಢ್ಯರನು ಬೆಂ
ಬತ್ತಿ ನಡೆವವುಪೇಕ್ಷೆ ನಿನ್ನದು ಹೇಳಲೇನದನು
ಹೆತ್ತ ಬಾಣಂತಿಯರು ರೋಗಿಗೆ
ಪತ್ಯ ನೀನಹೆ ಹೆಣದ ಬಾಯಿಗೆ
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕರವೆಂದ. ೪೫

ಸತ್ತದಿನದಾರಭ್ಯ ಮನುಜರು
ಮತ್ತೆ ಕರ್ಮವ ಹೊತ್ತು ಪಿಂಡವ
ನಿತ್ತು ತಪ್ಪದೆ ಮತ್ತೆ ವಾಯಸಕುಲವ ಕರೆಕರೆದು
ತುತ್ತನಿಡುವರು ಎಳ್ಳು ದರ್ಭೆಗೆ
ತೆತ್ತಿಗನು ನೀನಾದೆ ಕೀರ್ತಿಯ
ಹೊತ್ತುಕೊಂಡೆ ದುರಾತ್ಮ ನಿನ್ನೊಳು ಮಾತದೇಕೆಂದ. ೪೬

ಮಳೆದೆಗೆದು ಬೆಳೆಯಡಗಿ ಕ್ಷಾಮದ
ವಿಲಯಕಾಲದೊಳನ್ನವಿಲ್ಲದೆ
ಅಳಿದ ಪ್ರಾಣಿಗಳಾದರಿಸಿ ಸಲಹುವೆನು ಜಗವರಿಯೆ
ಎಲವೊ ನೀನೆಲ್ಲಿಹೆಯೊ ನಿನ್ನಯ
ಬಳಗವದು ತಾನೆಲ್ಲಿಹುದುಯೀ
ಹಲವು ಹುಲು ಧಾನ್ಯಗಳೆನಗೆ ಸರಿದೊರೆಯೆ ಕೇಳೆಂದ. ೪೭

ಬಲ್ಲಿದರು ಬರೆ ಬಡವರಲಿ ನಿ
ನ್ನಲ್ಲಿಯುಂಟುವುಪೇಕ್ಷೆ ನಮ್ಮಲಿ
ಸಲ್ಲದೀ ಪರಿಪಕ್ಷಪಾತವದಿಲ್ಲ ಭಾವಿಸಲು
ಬಲ್ಲಿದರು ಬಡವರುಗಳೆನ್ನದೆ
ಎಲ್ಲರನು ರಕ್ಷಿಸುವೆ ನಿರ್ದಯ
ನಲ್ಲ ತಾ ನಿನ್ನಂತೆ ಎಲ ಕುಟಿಲಾತ್ಮ ಹೋಗೆಂದ. ೪೮

ನಾನೆಲ್ಲೈ ಲೋಕದಲಿ ನಿರ್ದಯನು ಬಳಿ
ಕೇನಲ್ಲೈ ಸದ್ಧರ್ಮದಲಿ ಮಧು
ಪಾನವಾದೆಯಲಾ ದುರಾತ್ಮಕ ನಿನ್ನ ಸೇವಿಸಿದ
ದಾನವರು ಮಾನವ ಕಿರಾತರು
ಜ್ಞಾನವಳಿದು ವಿಕಾರದಲಿ ಮತಿ
ಹೀನರಾದರು ನಿನ್ನ ಗುಣವೇನೆಂದನಾ ನರೆದಲೆಗ ೪೯

ಆಡಬಹುದತಿಶಯವ ನೀ ಕೊಂ
ಡಾಡಿ ಕೊಂಬರೆ ಸಾಕು ಸಜ್ಜನ
ರಾಡಿದರೆ ಪತಿಕರಿಸೆ ಲಜ್ಜೆಗೆ ಸಿರವ ಬಾಗುವರು
ನೋಡಿರೈ ಸಭೆಯವರು ದುರ್ಮತಿ
ಗೇಡಿಯಿವನಾಡುವದ ನಾವಿ
ನ್ನಾಡಿದರೆ ಹುರುಳಿಲ್ಲ ಶಿವಶಿವಯೆಂದ ನರೆದಲೆಗ. ೫೦

ಸತ್ತವರ ಪ್ರತಿಬಿಂಬರೂಪನು
ಬಿತ್ತರಿಸಿ ಪಿತೃನಾಮಗಳ ನಿನ
ಗಿತ್ತು ಮೂವರ ಪೆಸರಿನಲಿ ಕರೆಕರೆದು ದರ್ಭೆಯಲಿ
ನೆತ್ತಿಯನು ಬಡಿಬಡಿದು ಕಡೆಯಲಿ
ತುತ್ತನಿಡುವರು ಪಶುಗಳಿಗೆ ನೀ
ನೆತ್ತಿದೆಯೆಲಾ ತನುವ ಸುಡಬೇಕೆಂದ ನರೆದಲೆಗ. ೫೧

ಏನಿಹಿರಿ ಹಿರಿಕಿರಿದ ನುಡಿಯದೆ
ಮೌನದೀಕ್ಷಿತರಾದಿರಲ ಕಂ
ಡೇನು ಮುರಿದಾಡುವಿರಸಾಧ್ಯವೊ ಸಾಧ್ಯವೋ ನಿಮಗೆ
ಈ ನಪುಂಸಕರನಲಿ ನಿರಂತರ
ವೇನು ಕಾರಣ ವಾದವಿದು ನಮ
ಗೇನು ಬುದ್ಧಿಯನರುಹುವಿರಿ ಪೇಳೆಂದ ನರೆದಲೆಗ. ೫೨

ಮಸೆದುದಿತ್ತಂಡಕ್ಕೆ ಮತ್ಸರ
ಪಿಸುಣ ಬಲರತಿ ನಿಷ್ಠುರರು ವಾ
ದಿಸಲು ಕಂಡನು ನೃಪತಿ ಮನದಲಿ ನೋಡಿ ನಸುನಗುತ
ಹಿಸುಣರಿವದಿರ ಮತ್ಸರವ ಮಾ
ಣಿಸುವ ಹದನೇನೆನುತ ಯೋಚಿಸಿ
ದಸುರ ಮುನಿಪರ ನೋಡೆ ಗೌತಮ ಮುನಿಪನಿಂತೆಂದ. ೫೩

ಅರಸುಗಳು ನಾವೆಲ್ಲ ಭೂಮೀ
ಸುರರು ನೆರದಿಹ ದಾನವರು ವಾ
ನರರು ನಮಗೀ ನ್ಯಾಯವನು ಪರಿಹರಿಸಲಳವಲ್ಲ
ಕರಸುವೆವು ಹರಿಹರವಿರಿಂಚಾ
ದ್ಯರನಯೋಧ್ಯೆಗೆಯಿವರ ಗುಣವಾ
ಧರಿಸಿ ಪೇಳ್ವರು ನಯದೊಳೆಂದನು ರಾಮ ನಸುನಗುತ. ೫೪

ಪರಮ ಧಾನ್ಯದೊಳಿಬ್ಬರೇ ಇವ
ರಿರಲಿ ಸೆರೆಯೊಳಗಾರು ತಿಂಗಳು
ಹಿರಿದು ಕಿರಿದೆಂಬಿವರ ಪೌರುಷವರಿಯಬಹುದಿನ್ನು
ಪುರಕೆ ಗಮನಿಸಿ ನಾವು ನಿಮ್ಮನು
ಕರಸುವೆವು ಕೇಳೆನುತಯೋಧ್ಯಾ
ಪುರಿಗೆ ಪಯಣವ ಮಾಡಹೇಳಿದನಾ ವಿಭೀಷಣಗೆ. ೫೫

ಸೆರೆಗೆ ನಮ್ಮನು ನೂಕಿ ದೇವರು
ಸಿರಿಯ ಮದದಲಿ ಕಳೆದರೆಮ್ಮನು
ಮರದು ಸಲಹುವರಾರು ನಿಮ್ಮಯ ಕರುಣ ಹೊರತಾಗಿ
ಧರೆಯೊಳಿನ್ನಪಕೀರ್ತಿ ನಾರಿಯ
ಸೆರಗ ಹಿಡಿವುದೆ ಲೇಸೆನುತ ತವೆ
ಕರಮುಗಿದು ತಲೆಗುತ್ತಿ ಪೇಳಿದನಾಗ ನರೆದಲೆಗ. ೫೬

ಆಗಲದಕೇನೆಂದು ಕರುಣಾ
ಸಾಗರನು ಬೀಳ್ಕೊಟ್ಟನವರನು
ಯೋಗಿಗಳ ವಶಮಾಡಿ ಗೌತಮಮುನಿಯನುಪಚರಿಸಿ
ರಾಗ ಮಿಗೆ ಮುನಿವರರನಲ್ಲಿ ಸ
ರಾಗದಿಂದಲೆ ಕಳುಹಿ ಬಳಿಕಾ
ಯಾಗಸಂರಕ್ಷಕನು ವೀಳೆಯವಿತ್ತನನಿಬರಿಗೆ. ೫೭

□□

ನೋಟ–೨

ಕೇಳು ಲಕ್ಷ್ಮಣ ಕೇಳು ಜಾಂಬವ
ಕೇಳು ನಳ ನೀಲಾದಿ ಸುಭಟರು
ಕೇಳಿರೈ ನರೆದಲೆಗವ್ರಿಹಿಯರು ಸೆರೆಯೊಳಿರ್ದವರ
ಕಾಲ ಸವೆದುದು ದಿವಸವಿಂದಿಗೆ
ಏಳು ತಿಂಗಳು ಕಳೆದರವದಿರ
ಪಾಲಿಸಲು ಬೇಗನಿಲಸುತ ನೀ ಕರೆದು ತಾರೆಂದ. ೧೨೪

ಹೈ ಹಸಾದವೆನುತ್ತ ವಂದಿಸೆ
ಬಾಹುಬಲಿದಗ್ಗಳಿಕೆ ಮಿಗೆ ನಿ
ರ್ವಾಹದಲಿ ಹೊರವಂಟನತಿ ವೇಗದಲಿ ಪಥವಿಡಿದು
ಸಾಹಸವನೇನೆಂಬೆ ವಜ್ರದ
ದೇಹನಲ್ಲಾ ಹನುಮ ತನ್ನ ಮ
ನೋಹರದ ರುಷಿಗಳನು ಕಂಡನು ಪಂಚನಂದಿಯಲಿ. ೧೨೫

ಅವರ ಪಾದಾಂಬುಜಕೆ ವಂದಿಸಿ
ಪವನಸುತ ಬಿನ್ನೈಸಿದನು ರಾ
ಘವ ನೃಪಾಲನು ಕಳುಹೆ ಬಂದೆನು ನಿಮ್ಮ ದರುಶನಕೆ
ಅವಧಿ ಸವೆದುದು ಸೆರೆಮನೆಯೊಳಿ
ರ್ದವರನೊಡಗೊಂಡೀಕ್ಷಣವೆ ನೀ
ವವನಿಪನ ಸಂಮುಖಕೆ ಚಿತ್ತೈಸೆಂದು ಕೈಮುಗಿದ. ೧೨೬

ಹನುಮನಾಡಿದ ನುಡಿಗೆ ಗೌತಮ
ಮುನಿಪ ನಸುನಗುತೆದ್ದು ಬನದಲಿ
ಘನತಪೋಬಲ ಮಹಿಮರನು ಕರೆಸಿದನತುಳವೇಗದಲಿ
ಮನದಿ ಹರುಷಿತನಾಗಿ ಮುನಿ ಸೆರೆ
ಮನೆಯ ಪ್ರತಿವಾದಿಗಳನೊಡಗೊಂ
ಡನುಪಮಿತ ಗುಣನಿಲಯ ಮುನಿ ಹೊರವಂಟನಾಶ್ರಮವ. ೧೨೭

ಬಂದನತಿಹರುಷದಲಿ ಮುನಿಕುಲ
ವೃಂದದೊಡನೈತರಲು ರಘುಕುಲ
ನಂದು ಬಿಜಯಂಗೈಸೆ ತಂದನು ರಾಜಮಂದಿರಕೆ
ಬಂದರೇ ಪ್ರತಿವಾದಿಗಳು ಕರ
ತಂದಿರೇ ನೀವೆನುತ ಮುನಿಕುಲ
ವೃಂದವನು ಸತ್ಕರಿಸಿ ಕುಳ್ಳಿರಿಸಿದನು ಗೌತಮನ. ೧೨೮

ಇವರ ವ್ಯವಹಾರವನು ಪರಿಹರಿ
ಸುವ ವಿಚಾರವ ನೋಡಿ ಮನದಲಿ
ರವಿಕುಲಾನ್ವಯ ರಾಮ ನೆನೆದನು ಹೃದಯ ಶುದ್ಧಿಯಲಿ
ಶಿವನ ಧ್ಯಾನಿಸಲಾಕ್ಷಣವೆ ತ್ರೈ
ಭುವನಕರ್ತರು ಇಂದ್ರ ಮೊದಲಾ
ದವರು ಬಂದರಯೋಧ್ಯಪುರಪತಿಧಾಮನೋಲಗಕೆ. ೧೨೯

ವಸುಗಳಮರರು ಭುಜಂಗಾಮರ
ರಸುರ ಕಿನ್ನರ ಯಕ್ಷ ರಾಕ್ಷಸ
ಶಶಿರವಿಗಳಾದಿತ್ಯ ವಿದ್ಯಾಧರರು ಗುಹ್ಯಕರು
ವಸುಧೆಯಮರರು ಕ್ಷತ್ರಿಯರು ಜೋ
ಯಿಸರು ವೈಶ್ಯ ಚತುರ್ಥರುನ್ನತ
ಕುಶಲ ವಿದ್ಯಾಧಿಕರು ನೆರೆದುದು ನೃಪನ ಸಭೆಯೊಳಗೆ. ೧೩೦

ಇಂತೆಸೆವನಾ ಸಭೆಯೊಳಗೆ ಮತಿ
ವಂತ ನುಡಿದನಾ ಧಾನ್ಯವರ್ಗದ
ಸಂತತಿಯ ಬರಹೇಳಿಯೆನೆ ಸೆರೆಮನೆಯೊಳಿರ್ದವರು
ನಿಂತು ಕರಗಳ ಮುಗಿದು ಧರಣೀ
ಕಾಂತ ರಘುವರನೀ ಸುಬುದ್ಧಿಯ
ನೆಂತು ನಮಗರುಹುವಿರಿಯದ ಪೇಳೆಂದ ನರೆದಲೆಗ. ೧೩೧

ಎನಲು ರಾಮನೃಪಾಲ ನೋಡಿದ
ಘನ ತಪೋಮಹಿಮರಿಗೆ ನುಡಿದನು
ಮನವ ವಂಚಿಸಲಾಗದೀ ಧರ್ಮವನು ನೆರೆತಿಳಿದು
ಅನುನಯದಿ ಪೇಳೆನೆ ಮುನೀಂದ್ರರು
ಅನಿಮಿಷರನೀಕ್ಷಿಸಿದರಲ್ಲಿಯ
ಘನ ಮಹಾಸಭೆಯೊಳಗೆ ಭಾರ್ಗವ ರಾಮನಿಂತೆಂದ. ೧೩೨

ಆರು ನುಡಿಯರೆ ನೀವು ಹಿರಿಯರು
ಮೀರಿಸುವರಾರಿವರೊಳಗೆ ಗುಣ
ಸಾರನಾವನು ಪೇಳೆನಲು ಜಂಭಾರಿ ನಸುನಗುತ
ಸಾರಹೃದಯನು ನರೆದಲೆಗ ನಿ
ಸ್ಸಾರನೀ ವ್ರಿಹಿಯೆನಲು ಗುಣನಿಧಿ
ಮಾರುತಾತ್ಮಜ ನೋಡಿದನು ಸನ್ನೆಯಲಿ ನಾರದನ. ೧೩೩

ಅಹುದು ಸುರಪನ ಮಾತು ನಿಶ್ಚಯ
ವಹುದು ನರೆದಲೆಗನೆ ಸಮರ್ಥನು
ಬಹಳ ಬಲಯುತ ಸೆರೆಗೆ ತಳ್ಳಲು ಕಾಂತಿಗೆಡಲಿಲ್ಲ
ಸಹಜವಿದು ಪರಪಕ್ಷವಾದಡೆ
ವ್ರಿಹಿ ಕರಗಿ ಕಂದಿದನು ಸೆರೆಯಲಿ
ವಿಹಿತವಿದು ಕೇಳೆಂದು ನಾರದ ನುಡಿದ ನಸುನಗುತ. ೧೩೪

ಎಲ್ಲ ನವಧಾನ್ಯದಲಿ ಈತನೆ
ಬಲ್ಲಿದನು ಹುಸಿಯಲ್ಲ ಬಡವರ
ಬಲ್ಲಿದರನಾರೈದು ಸಲಹುವನಿವಗೆ ಸರಿಯುಂಟೆ
ನೆಲ್ಲಿನಲಿ ಗುಣವೇನು ಭಾಗ್ಯದಿ
ಬಲ್ಲಿದರ ಪತಿಕರಿಸುವನು ಅವ
ನಲ್ಲಿ ಸಾರವ ಕಾಣೆಯೆಂದನು ಕಪಿಲಮುನಿ ನಗುತ. ೧೩೫

ಸುರಮುನಿಗಳಿಂತೆನಲು ಭೂಸುರ
ವರರು ಸಂತೋಷಿಸಲು ಸಭಿಕರು
ನರೆದಲೆಗ ನೀ ಬಾರೆನುತ ರಾಮನೃಪಾಲ ನೆರೆಮೆಚ್ಚಿ
ಕರೆದುಕೊಟ್ಟನು ತನ್ನ ನಾಮವ
ಧರೆಗೆ ರಾಘವನೆಂಬ ಪೆಸರಾ
ಯ್ತಿರದೆ ವ್ರಿಹಿ ನಾಚಿದನು ಸಭೆಯಲಿ ಶಿರವ ಬಾಗಿಸಿದ. ೧೩೬

ಹರುಷದೋರಿದ ಮನದಿ ನಲಿವುತ
ನರೆದಲೆಗನೈತಂದು ರಾಮನ
ಸಿರಿಚರಣಕಭಿನಮಿಸೆ ದೇವಾಸುರರು ಕೊಂಡಾಡೆ
ಹರಸಿ ಮುತ್ತಿನ ಸೇಸೆಯನು ಭೂ
ಸುರರು ಮಂತ್ರಾಕ್ಷತೆಯನಿತ್ತುಪ
ಚರಿಸಿದರು ರಾಗಿಯನು ಪೊಗಳಿದರಲ್ಲಿ ಮುನಿವರರು. ೧೩೭

(ಬೇರೆ ಬೇರೆ ದೇವತೆಗಳು ನರೆದಲೆಗನನ್ನು ಹೊಗಳಿ ಅವನಿಗೆ ಕೊಡುಗೆಗಳನ್ನು ನೀಡುತ್ತಾರೆ. ಇದೆಲ್ಲವನ್ನೂ ನೋಡುತ್ತ ವ್ರಿಹಿಯ ಸಂಕಟ ಹೆಚ್ಚಾಗುತ್ತದೆ.)

ಇಂತು ಸಭೆಯಲಿ ಮಾನಭಂಗವ
ದೆಂತು ಬಂದುದು ತನಗೆನುತಲತಿ
ಚಿಂತೆಯಲಿ ಕಡುನೊಂದು ತಲೆಗುತ್ತಿದನು ನೀರೊಳಗೆ
ಇಂತು ಪರಿತಾಪದಲಿ ಲಕ್ಷ್ಮೀ
ಕಾಂತ ಶಿವಶಿವಯೆನುತಲಿರೆ ಭೂ
ಕಾಂತ ದಶರಥರಾಮನಾಥನು ಕರೆದು ಲಾಲಿಸಿದ. ೧೪೬

ಮರುಳೆ ಬಾರೈ ವ್ರಿಹಿಯೆ ಮನದಲಿ
ಕೊರಗಿ ಚಿಂತಿಸಲೇಕೆ ನಾವೀ
ನರೆದಲೆಗನತಿಶಯವ ಮಾಡಿದೆವೆಂದು ಕನಲಿದೆಯ
ಧರೆಗೆ ಹೊದ್ದಿದ ಕ್ಷಾಮಗಾಲದಿ
ಕರುಣದಿಂ ನಡೆತಂದು ಲೋಕವ
ಹೊರೆವನದು ಕಾರಣವೆ ಪತಿಕರಿಸಿದೆವು ಕೇಳೆಂದ. ೧೪೭

ದೀನರಲಿ ದಾರಿದ್ರ ಜನದಲಿ
ನೀನು ನಿರ್ದಯನೆಂದೆವಲ್ಲದೆ
ಹೀನಗಳೆದವರಲ್ಲ ನಿನ್ನನು ನಾವು ಸಭೆಯೊಳಗೆ
ಮಾನುಷನು ನಮ್ಮೆಡೆಗೆ ನೀ ಸುರ
ಧೇನುವಿನ ಸಮ ನಿನ್ನ ಚಿತ್ತದಿ
ಹಾನಿದೋರಲದೇಕೆ ಬಿಡು ಬಿಡು ಚಿಂತೆ ಯಾಕೆಂದ. ೧೪೮

ದೇವರಿಗೆ ಪರಮಾನ್ನ ನೀ ಮನು
ಜಾವಳಿಗೆ ಪಕ್ವಾನ್ನಮೀತನು
ನೀವು ಧರೆಯೊಳಗಿಬ್ಬರತಿ ಹಿತದಲಿ ನೀವಿಹುದು
ನಾವು ಕೊಟ್ಟೆವು ವರವ ಸಲ್ಲುವು
ದಾವ ಕಾಲದಲಿನ್ನು ನೀವೇ
ಪಾವನರು ಪರಮಸುಖಿಯೆಂದುಪಚರಿಸಿದನು ನೃಪತಿ. ೧೪೯

ㅁㅁ

ಬರಹಗಾರ

ಹೆಸರು: ಸಿ.ಪಿ. ನಾಗರಾಜ (1945)

ತಾಯಿ: ಲಕ್ಷ್ಮೀದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ: ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು: ಎಂ.ಎ., ಪಿಎಚ್.ಡಿ.,

ಕೆಲಸ: ಕನ್ನಡ ಅಧ್ಯಾಪಕ

1971–72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ

1972–2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

2006–2021 ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಬರಹ: 1. ಮುದ್ರಿತ ಪುಸ್ತಕಗಳು

ನಾಟಕ: ಭಾಗೀರಥಿ, ಅಂಬೆ, ಹಾವು, ಅಂಗಿಬಟ್ಟೆ, ಒಂದು ರೂಪಾಯಿ, ಕಳ್ಳರಿದ್ದಾರೆ ಎಚ್ಚರಿಕೆ, ಹೆಣದ ಹಣ. ಮೂರು ಸಾಮಾಜಿಕ ನಾಟಕಗಳು

ಗದ್ಯ: ಕರಿಯನ ಪುರಾಣ, ಕನಕನ ಅವ್ವ, ಹಳ್ಳಿಗಾಡಿನ ರೂವಾರಿ, ಡಾ. ಬಂದೀಗೌಡ, ಬಯ್ಗುಳ

ಸರ್ವಜ್ಞ ವಚನಗಳ ಓದು, ಅಲ್ಲಮ ವಚನಗಳ ಓದು, ಶಿವಶರಣೆಯರ ವಚನಗಳ ಓದು, ಶಿವಶರಣರ ವಚನಗಳ ಓದು, ಬಸವಣ್ಣ ವಚನಗಳ ಓದು, ಮುದ್ದೆ ಗಂಟು, ಶಿವಶರಣಶರಣೆಯರ ವಚನಗಳ ಓದು, ಪಂಪ ಭಾರತ ಓದು, ಸರ್ವಜ್ಞ ಮತ್ತು ಅಲ್ಲಮ ವಚನಗಳ ಓದು, ಕನ್ನಡ ಬಯ್ಗುಳ ಓದು, ವಚನದಿಂದ ಆಯ್ದ ಸಾಲುಗಳ ಓದು, ರಾಮಧಾನ್ಯ ಪ್ರಸಂಗ ಓದು

2. ಮೈಲಾಂಗ್ ಡಿಜಿಟಲ್ ಪುಸ್ತಕಗಳು

https://mylang.in/collection/cpnagaraja

ಏಳು ನಾಟಕಗಳು (ಇಬುಕ್); ಭಾಗೀರಥಿ (ನಾಟಕ–ಇಬುಕ್); ಅಂಬೆ (ನಾಟಕ–ಇಬುಕ್); ಹಾವು (ನಾಟಕ–ಇಬುಕ್); ಅಂಗಿ ಬಟ್ಟೆ (ನಾಟಕ–ಇಬುಕ್); ಒಂದು ರೂಪಾಯಿ (ನಾಟಕ–ಇಬುಕ್); ಕಳ್ಳರಿದ್ದಾರೆ.. ಎಚ್ಚರಿಕೆ (ನಾಟಕ–ಇಬುಕ್); ಹೆಣದ ಹಣ(ನಾಟಕ–ಇಬುಕ್); ಶಿವಶರಣಶರಣೆಯರ ವಚನಗಳ ಓದು(ಇಬುಕ್);

ಬಯ್ಗುಳ (ಆಡಿಯೋ ಬುಕ್); ಸರ್ವಜ್ಞನ ವಚನಗಳ ಓದು (ಆಡಿಯೋ ಬುಕ್); ಅಲ್ಲಮನ ವಚನಗಳ ಓದು (ಆಡಿಯೋ ಬುಕ್); ಬಸವಣ್ಣನ ವಚನಗಳ ಓದು (ಆಡಿಯೋ ಬುಕ್); ಶಿವಶರಣಶರಣೆಯರ ವಚನಗಳ ಓದು–1–(ಆಡಿಯೋ ಬುಕ್); ಶಿವಶರಣಶರಣೆಯರ ವಚನಗಳ ಓದು–2–(ಆಡಿಯೋ ಬುಕ್); ವಚನದಿಂದ ಆಯ್ದ ಸಾಲುಗಳ ಓದು–1–(ಆಡಿಯೋ ಬುಕ್); ವಚನದಿಂದ ಆಯ್ದ ಸಾಲುಗಳ ಓದು–2–(ಆಡಿಯೋ ಬುಕ್); ಮುದ್ದೆಗಂಟು (ಆಡಿಯೋ ಬುಕ್).

3. **C P Nagaraj-You Tube**

PLAY LISTS

ಸರ್ವಜ್ಞನ ವಚನಗಳ ಓದು– 13 ಎಪಿಸೋಡ್

ಅಲ್ಲಮನ ವಚನಗಳ ಓದು– 36 ಎಪಿಸೋಡ್

ಬಸವಣ್ಣನ ವಚನಗಳ ಓದು– 26 ಎಪಿಸೋಡ್

ಶಿವಶರಣಶರಣೆಯರ ವಚನಗಳ ಓದು– 52 ಎಪಿಸೋಡ್

ವಚನದಿಂದ ಆಯ್ದ ಸಾಲುಗಳ ಓದು– 162 ಎಪಿಸೋಡ್

ಮುದ್ದೆಗಂಟು– 60 ಎಪಿಸೋಡ್

ವಿಳಾಸ: ಸಿ.ಪಿ.ನಾಗರಾಜ, 75, 'ಎ' ಬ್ಲಾಕ್, 5ನೆಯ ಕ್ರಾಸ್, ಕ್ರಿಷ್ಣ ಗಾರ್ಡನ್, ಆರ್.ವಿ. ಕಾಲೇಜು ಪೋಸ್ಟ್, ಬೆಂಗಳೂರು–560059, ಮೊ: 9986347521.
e-mail : ngy7777@gmail.com

❖❖❖



ಹೊಸ ಮನೆಯ ಪುಣ್ಯಾರ್ಚನೆಗೆ ಮಿಗೆ
ಯೆಸೆವ ಮದುಮಕ್ಕಳಿಗೆ ಸೇಸೆಗೆ
ವಸುಮತೀಶರ ಗರುಡಿಯಲಿ ಶಸ್ತ್ರಾಸ್ತ್ರದರ್ಚನೆಗೆ
ಎಸೆವ ವಿಪ್ರರ ಫಾಲದಲಿ ರಂ
ಜಿಸುವ ಗಂಧಾಕ್ಷತೆಯಹೆನು ಭಾ
ವಿಸಲು ಲೋಕದೊಳಾರು ಸರಿಯಿಂತೆಂದನಾ ವ್ರಿಹಿಗ

ಬಲ್ಲಿದರು ಬರೆ ಬಡವರಲಿ ನಿ
ನ್ನಲ್ಲಿಯುಂಟುವುಪೇಕ್ಷೆ ನಮ್ಮಲಿ
ಸಲ್ಲದೀ ಪರಿ ಪಕ್ಷಪಾತವದಿಲ್ಲ ಭಾವಿಸಲು
ಬಲ್ಲಿದರು ಬಡವರುಗಳೆನ್ನದೆ
ಎಲ್ಲರನು ರಕ್ಷಿಸುವೆ ನಿರ್ದಯ
ನಲ್ಲ ತಾ ನಿನ್ನಂತೆ ಎಲ ಕುಟಿಲಾತ್ಮ ಹೋಗೆಂದ

ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು.

ರೂ. 100/-